ವಿಶ್ವರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 | ಸಂಚಿಕೆ 34 | ಆಗಸ್ಟ್ 19, 1984 | ಬೆಲೆ 60 ಪೈಸೆ.

ಸಾಮ್ರಾಜ್ಯಶಾಹಿಗಳ ಮತ್ತು ವಿಚ್ಛಿದ್ರಕಾರಿ ಶಕ್ತಿಗಳ ಕುರಿತು ಎಚ್ಚರಿಕೆ

— ಕಾ॥ ಪಿ. ರಾಮಚಂದ್ರರಾವ್

ದೇಶ ವಿದೇಶಗಳ ರಾಜಕೀಯ ಪರಿಸ್ಥಿತಿಯನ್ನು ವಿಶ್ಲೇಷಿಸಿದಾಗ ನಾವು ಒಂದು "ರಾಜಕೀಯ ತಿರುವು ಬಿಂದು" ವಿನಲ್ಲಿದ್ದೇವೆ ಎಂದು ತಿಳಿದು ಬರುತ್ತದೆ. ಜಾಗತಿಕ ಪರಿಸ್ಥಿತಿಯನ್ನು ನೋಡೋಣ. ಯುದ್ಧ ಮತ್ತು ಶಾಂತಿಯ ಸಮಸ್ಯೆಗಳು ಅತ್ಯಂತ ಮಹತ್ವದ ಸಮಸ್ಯೆಯಾಗಿದೆ. ಅಮೇರಿಕನ್ ಸಾಮ್ರಾಜ್ಯಶಾಹಿಗಳು ಅಣುಯುದ್ಧ ನಡೆಸಲು ಎಲ್ಲಾ ರೀತಿಯ ತಯಾರಿ ನಡೆಸಿದ್ದಾರೆ. ರೀಗನ್ನರಿಗೆ "ಅಣುಯುದ್ಧವು" ತಮಾಷೆಯ ಸಂಗತಿಯಾಗಿ ಬಿಟ್ಟಿದೆ. ಒಂದು ಭಾಷಣಕ್ಕಾಗಿ ಮೈಕ್ ಪರೀಕ್ಷೆಯ ವೇಳೆ ರೀಗನರು ಹೀಗೆ ಹೇಳಿದರು "ಅಮೇರಿಕದ ಜನರೇ ನಾನು ಸೋವಿಯತ್ ಯೂನಿಯನ್‌ನ ಮೇಲೆ ಬಾಂಬ್ ಧಾಳಿ ಮಾಡಲು ಈಗಾಗಲೇ ಆಜ್ಞೆ ಮಾಡಿದ್ದೇನೆ, ಇನ್ನು ಐದು ನಿಮಿಷಗಳಲ್ಲಿ ಆ ಧಾಳಿ ಆರಂಭವಾಗುತ್ತದೆ" ಎಂದು ಹೇಳಿರುವುದಾಗಿ ವರದಿಯಾಗಿದೆ. ಹೀಗೆ ಅವರು ಮಾತನಾಡಿದ್ದು ಸತ್ಯವೆಂದೂ, ಆದರೆ ಅದು ತಮಾಷೆಗಾಗಿ ಮಾತಾಡಿದ್ದೆಂದೂ ಅವರ ಅಧಿಕೃತ ವಕ್ತಾರರು ಆಮೇಲೆ ವಿವರಣೆ ಕೊಟ್ಟರು. ಪ್ರಶ್ನೆ ಅದಲ್ಲ, ಅಣುಯುದ್ಧದ ವಿರುದ್ಧ ಜಗತ್ತಿನಾದ್ಯಂತ ಕೋಟಿ ಸಂಖ್ಯೆಯಲ್ಲಿ ಜನತೆ ಸತತವಾಗಿ ಪ್ರತಿಭಟನೆ ಮತ್ತು ಪ್ರದರ್ಶನವನ್ನು ಗೈಯುತ್ತಿರುವಾಗ, ಅಣುಯುದ್ಧವು ಮಾನವ ಜನಾಂಗದ ಅಳಿವು-ಉಳಿವಿನ ಪ್ರಶ್ನೆಯಾಗಿರುವಾಗ ಅಮೇರಿಕಾದ ಸಾಮ್ರಾಜ್ಯಶಾಹಿಗಳ ನೇತಾರ ರೀಗನರು ಈ ಪ್ರಶ್ನೆಯನ್ನೇ ತಮ್ಮ "ತಮಾಷೆ"ಯ ವಸ್ತುವಾಗಿ ಮಾಡುತ್ತಿದ್ದಾರೆ ಎಂದರೆ ಅಣುಯುದ್ಧದ ತಯಾರಿಯಲ್ಲಿ ಅವರು ಎಷ್ಟು ಗಂಭೀರವಾಗಿ ಕ್ರಿಯಾಶೀಲರಾಗಿದ್ದಾರೆ ಎಂಬುದನ್ನು ಊಹಿಸಬಹುದು. ಎಚ್ಚರವಾಗಿರಬೇಕಾಗಲೀ, ನಿದ್ದೆಯಲ್ಲೂ ಈ ಕುರಿತು ಅವರು ಚಿಂತನೆ ಮಾಡುತ್ತಿರಬೇಕಲ್ಲವೇ. ಅದೇ ವೇಳೆಯಲ್ಲಿ ಮಾನವ ಜನಾಂಗದ ಅದೃಷ್ಟ ಎಂಬಂತೆ ಜಗತ್ತಿನ ಪ್ರಥಮ ಕಾರ್ಮಿಕ ವರ್ಗದ ನೇತೃತ್ವದ ಸಮಾಜವಾದೀ ರಾಷ್ಟ್ರ ರಷ್ಯಾ "ಅಣುಯುದ್ಧ"ದ ವಿರುದ್ಧ ತನ್ನ ರಾಷ್ಟ್ರವನ್ನು, ತನ್ನ ಮಿತ್ರ ರಾಷ್ಟ್ರಗಳನ್ನು ರಕ್ಷಿಸಲು ಅವಶ್ಯವಿರುವ ಎಲ್ಲಾ ಕ್ರಮಗಳನ್ನು ವಹಿಸುತ್ತಿರುವಾಗಲೇ, ಮಾನವ ಜನಾಂಗವನ್ನು "ಅಣುಯುದ್ಧ"ದ ಭೀತಿಯಿಂದ ತಪ್ಪಿಸಲು ಎಲ್ಲಾ ಶಾಂತಿ ಕ್ರಮಗಳನ್ನು ವಹಿಸುತ್ತಿದೆ. ಶಾಂತಿಗಾಗಿ ಅಹೋರಾತ್ರಿ ಹೋರಾಡುತ್ತಿದೆ. ಶಾಂತಿ ಸೂತ್ರಗಳನ್ನು ಒಂದರ ನಂತರ ಜಗಜ್ಜಾಹೀರುಗೊಳಿಸುತ್ತಿದೆ. "ನಾವು ಪ್ರಥಮವಾಗಿ ಅಣು ಬಾಂಬುಗಳನ್ನು ಯಾವ ರಾಷ್ಟ್ರದ ಮೇಲೂ ಎಸೆಯುವುದಿಲ್ಲ. ಈಗ ಜಗತ್ತಿನ ಶಕ್ತಿ ಸಮತೋಲನದ ಆಧಾರದಲ್ಲಿ ಎಲ್ಲಾ ಶಸ್ತ್ರಾಸ್ತ್ರಗಳನ್ನು ಮಿತಿಗೊಳಿಸುವುದಕ್ಕೆ ನಾವು ತಯಾರು. ಕಡಿಮೆ ಗೊಳಿಸಿದ ಅಣು ಶಸ್ತ್ರಾಸ್ತ್ರಗಳನ್ನು ಸಂಪೂರ್ಣವಾಗಿ ನಾಶ ಮಾಡೋಣ. ಅಮೇರಿಕವು ಇತ್ತೀಚೆಗೆ ಪ. ಜರ್ಮನಿ ಮತ್ತು ಬ್ರಿಟನ್ನಿನಲ್ಲಿ ಇರಿಸಿದ "ಪರ್ಶಿಂಗ್" ಕ್ಷಿಪಣಿಗಳನ್ನು ಹಿಂತೆಗೆದಾಕ್ಷಣ ಪುನಃ ಶಾಂತಿ ಒಪ್ಪಂದದ ಮಾತುಕತೆಗಳನ್ನು ಆರಂಭಿಸೋಣ ಇತ್ಯಾದಿ... ಇತ್ಯಾದಿ." ಸೂತ್ರಗಳನ್ನು ರಷ್ಯಾ ಬಿತ್ತರಿಸುತ್ತಾ ಬರುತ್ತಿದೆ.

ಇಲ್ಲಿ ಒಂದಂಶವನ್ನು ಶಾಂತಿಪ್ರಿಯ ಜನತೆ ಪರಿಗಣಿಸಬೇಕು. ಎರಡನೇ ಮಹಾಯುದ್ಧದಲ್ಲಿ ರಷ್ಯಾ ದೇಶವು ಮಿಲಿಯಾಂತರ ಪ್ರಜೆಗಳನ್ನು ಕಳೆದುಕೊಂಡಿದೆ. ಅರೆವಾಸಿಗಿಂತಲೂ ಅಧಿಕ ರಷ್ಯಾ ದೇಶವು ಯುದ್ಧದ ಭೀಕರ ಪರಿಣಾಮಗಳಿಗೆ ಬಲಿಯಾಗಿತ್ತು.... ಅದೇ ವೇಳೆ ಅಮೇರಿಕಾ ಯುದ್ಧದಲ್ಲಿ ಅಪಾರ ಲಾಭ ಗಳಿಸಿತ್ತು. ಯುದ್ಧಾನಂತರ ಎಲ್ಲಾ ಹಳೆಯ ಸಾಮ್ರಾಜ್ಯಶಾಹಿಗಳನ್ನು ಬದಿಗೊತ್ತಿ ಒಂದನೇ ಬಲಿಷ್ಠ ರಾಷ್ಟ್ರವಾಗಿತ್ತು.

ಈಗ ಜಗತ್ತಿನಲ್ಲಿ ರಷ್ಯಾವು ಶಕ್ತಿಯಲ್ಲಿ ಸಮತೋಲನ ಪಡೆದ ಕಾರಣ, ಈಗ ಜಗತ್ತಿನಲ್ಲಿ ಎಲ್ಲೆಡೆಗಳಲ್ಲಿ ವಿವಿಧ ಭೂ ಖಂಡಗಳ ಜನತೆ "ಹಳೆಯ ಆರ್ಥಿಕ ಪದ್ಧತಿಯಿಂದ ಹೊಸ ಆರ್ಥಿಕ ಪದ್ಧತಿಯೆಡೆಗೆ" ಮುನ್ನುಗ್ಗುವ ಹೋರಾಟಗಳನ್ನು ನಡೆಸುತ್ತಿರುವಾಗ, ಪ್ರತ್ಯಕ್ಷ ಸೈನ್ಯಾಚರಣೆ ಮತ್ತು ಯುದ್ಧದ ವಿನಹ ಜಗತ್ತಿನ ಜನಾಂಗಗಳು "ಆರ್ಥಿಕ ವಿಮೋಚನೆ ಮತ್ತು ಸಮಾಜವಾದ" ದತ್ತ ಚಲಿಸುವುದನ್ನು ತಡೆಗಟ್ಟಲು ಸಾಧ್ಯವಿಲ್ಲದಿರುವಾಗ ತನ್ನ ನೆರೆ ಹೊರೆಯಲ್ಲೇ ಎಲ್ ಸಾಲ್ವಡೋರ್, ನಿಕರಾಗುವಾ ಮೊದಲಾದ ಸಣ್ಣ ದೇಶಗಳೂ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಹಳೇ ನೀತಿಗಳನ್ನು ಧಿಕ್ಕರಿಸಿ ಅವರ ಹುಕುಂನಾಮವನ್ನು ತಿರಸ್ಕರಿಸುತ್ತಿರುವಾಗ, ಅಮೇರಿಕನ್ ಸಾಮ್ರಾಜ್ಯಶಾಹಿಗಳು "ಯುದ್ಧ, ಅಣುಯುದ್ಧ, ಸಮಾಜವಾದೀ ರಾಷ್ಟ್ರಗಳ ನಾಶ" ಅದರಲ್ಲೂ ರಷ್ಯಾದ ನಾಶಮಾಡಲು ನಿರ್ಧರಿಸಿದಂತಿದೆ.

ಜಗತ್ತಿನ ಎಲ್ಲಾ ಪ್ರಗತಿಪರ ಶಕ್ತಿಗಳು, ಜಗತ್ತಿನ ಎಲ್ಲಾ ಶಾಂತಿ ಪ್ರಿಯ ಜನತೆ ಈ ಅಂಶವನ್ನು ತಿಳಿದು ಯುದ್ಧವನ್ನು ತಡೆಯುವುದಕ್ಕಾಗಿ ತಮ್ಮ ಸತತ ಪ್ರಯತ್ನವನ್ನು ನಡೆಸಬೇಕಾಗಿದೆ. ಅವಿರತವಾಗಿ ರೀಗನ್ ಯುದ್ಧ ನೀತಿಯನ್ನು ಬಯಲಿಗೆಳೆಯಬೇಕಾಗಿದೆ "ಯುದ್ಧ ಮತ್ತು ಶಾಂತಿ" ಇಂದು ಎಲ್ಲಾ ಜನ ವಿಭಾಗಗಳ ಅಳಿವು-ಉಳಿವಿನ ಪ್ರಶ್ನೆ ಎಂದು ತಿಳಿದು ಜನತೆ

(8ನೇ ಪುಟ ನೋಡಿ)

ಆಗಸ್ಟ್ 15 ರ ಭಾಷಣಗಳೂ ಕೃತಿಗಳೂ

38 ನೇ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ರಾಷ್ಟ್ರಾಧ್ಯಕ್ಷ ಜೇಲ್‌ಸಿಂಗ್ ಹಾಗೂ ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರು ಮಾಡಿದ ಭಾಷಣಕ್ಕೂ ಅವರ ನೇತೃತ್ವದ ಸರ್ಕಾರದ ಕೃತಿಗಳಿಗೂ ಏನೂ ಸಂಬಂಧವೇ ಇಲ್ಲವೆಂಬ ನಿಜ ಸಂಗತಿ ಭಾಷಣಗಳನ್ನು ಕೇಳಿದವರಿಗೆ ಸ್ಪಷ್ಟವಾಗದಿರದು.

"ಹಿಂಸಾಚಾರದ ಚಳುವಳಿಗಳು ಮತ್ತು ಉಗ್ರಗಾಮಿ ಚಟುವಟಿಕೆಗಳು ರಾಷ್ಟ್ರವನ್ನು ದುರ್ಬಲಗೊಳಿಸುವುದು ಅಷ್ಟೇ ಅಲ್ಲ ದಾರಿದ್ರ್ಯ ಸ್ಥಿತಿ ಮುಂದುವರಿಯುವುದಕ್ಕೂ ಕಾರಣವಾಗುತ್ತದೆ" ಎಂದು ರಾಷ್ಟ್ರಪತಿ ಜೇಲ್ ಸಿಂಗ್ ಅವರು ಹೇಳಿದ್ದಾರೆ.

ಹಿಂಸಾಚಾರ ಚಳುವಳಿಗಳಿಗೂ ಉಗ್ರಗಾಮಿ ಚಟುವಟಿಕೆಗಳಿಗೂ ಪ್ರೋತ್ಸಾಹ ಕೊಡುತ್ತಾ ಬಂದು, ವಿದೇಶಿಯರ ಕೈವಾಡಕ್ಕೆ ಎಲ್ಲ ರೀತಿಯ ಅನುಕೂಲತೆಗಳನ್ನೊದಗಿಸುತ್ತ ದೇಶದ ಸಾರ್ವಭೌಮತ್ವಕ್ಕೆ, ಐಕ್ಯತೆಗೆ ಅಪಾಯವನ್ನುಂಟು ಮಾಡಿರುವ ಕಾಂಗ್ರೆಸ್ ಆಡಳಿತೆಯ ದಾರುಣಕತೆ ದೇಶದ ಮುಂದಿದೆ. ಮುವತ್ತೈದು ವರ್ಷಗಳ ಪೂರ್ಣ ಕತೆಯನ್ನು ವಿವರಿಸುವ ಅಗತ್ಯತೆ ಯಿಲ್ಲದಿದ್ದರೂ ಕಳೆದ ಮೂರು ನಾಲ್ಕು ವರ್ಷಗಳಿಂದ ಅಸ್ಸಾಂ, ಮಿಝೋರಾಂ, ಪಂಜಾಬ್, ಕಾಶ್ಮೀರ ಮಹಾರಾಷ್ಟ್ರಗಳ ದುರಂತ ಕತೆಯ ಕಾವು ಇನ್ನೂ ಬಿಸಿಯಾಗಿಯೇ ಉಳಿದು, ಇಡೀ ದೇಶವನ್ನೇ ಆವರಿಸುವ ಪರಿಸ್ಥಿತಿಯಲ್ಲಿದೆ. ಅಸ್ಸಾಂ, ಪಂಜಾಬ್, ಮಹಾರಾಷ್ಟ್ರ, ಕಾಶ್ಮೀರ ಹಾಗೆಯೇ ದೇಶದ ಹಲವಾರು ಪ್ರದೇಶಗಳಲ್ಲಿ ನಡೆದ ದಂಗೆ, ಆಸ್ತಿ—ಜೀವಹಾನಿಗಳಿಗೆಲ್ಲ ಇಂದಿರಾ ಸರ್ಕಾರ ಅನುಸರಿಸುತ್ತಿರುವ ರಾಜಕೀಯ ಧೋರಣೆಯೇ ಮೂಲ ಕಾರಣವಾಗಿದೆ. ತನ್ನ ರಾಜಕೀಯ ಅಧಿಕಾರವನ್ನು ಭದ್ರಗೊಳಿಸುವ ಸಲುವಾಗಿ ಜಾತೀಯ, ಮತೀಯ, ಛಿದ್ರಕಾರಿ ಶಕ್ತಿಗಳಿಗೆಲ್ಲ ಪ್ರೋತ್ಸಾಹ ನೀಡಿ, ಸಾಮಾಜಿಕ ಪರಿಸ್ಥಿತಿಯನ್ನು ಅಭದ್ರಗೊಳಿಸುವಲ್ಲಿ ಇಂದಿರಾ ಗಾಂಧಿ ಯಾವ ರೀತಿಯ ಶಕುನಿ ತಂತ್ರ ಉಪಯೋಗಿಸುತ್ತಿದ್ದಾರೆಂಬುದಕ್ಕೆ ಬಿಂದ್ರನ್ ವಾಲೆ, ಬಾಳ ಠಾಕ್ರೆ, ಫಾಗಳ ಕತೆಗಳೇ ಸಾಕ್ಷಿಯಾಗಿ ಉಳಿದಿವೆ. ಒಂದೆಡೆ ಇಂಥ ಛಿದ್ರಕಾರಿ ಶಕ್ತಿಗಳಿಗೆಲ್ಲ ಪ್ರೋತ್ಸಾಹ ನೀಡುತ್ತಾ, ವಿರೋಧ ಪಕ್ಷಗಳೂ, ವಿಚಾರವಂತ ಜನತೆಯೂ ಅಂಥ ಘಟನೆಗಳ ವಿರುದ್ಧ ಪ್ರತಿಭಟನೆ—ರೋಷ ವ್ಯಕ್ತ ಮಾಡುತ್ತ ಬಂದಂತೆ, ವಿದೇಶಿ ಮತ್ತು ದೇಶಿಯ ಛಿದ್ರಕಾರಿ ಚಟುವಟಿಕೆಗಳಿಂದಾಗಿ ಗಂಡಾಂತರವನ್ನೆದುರಿಸುತ್ತಿದೆಂದು ಟಿ. ವಿ., ರೇಡಿಯೋಗಳ ಮೂಲಕ ಹೇಳಿಕೆಗಳನ್ನು ನೀಡುತ್ತ ದೇಶದ ರಕ್ಷಣೆಯಾಗಬೇಕಾದರೆ ತನ್ನಿಂದಲೇ ಸಾಧ್ಯವೆಂಬುವನ್ನು ಪ್ರದರ್ಶಿಸಲು ಹೊರಟಿದ್ದಾರೆ ಇಂದಿರಾ ಗಾಂಧಿ.

ಬಡತನ, ದಾರಿದ್ರ್ಯಗಳು ಅಪಾಯಕಾರಿ ಎಂದು ಹೇಳುವ ಜೇಲ್ ಸಿಂಗ್ ಮತ್ತು ಇಂದಿರಾ ಗಾಂಧಿಯವರು ಕಳೆದ 35 ವರ್ಷಗಳ ತಮ್ಮ ಆಡಳಿತೆಯಲ್ಲಿ ದಾರಿದ್ರ್ಯ, ಬಡತನಗಳನ್ನು ನೀಗಿಸಲು ಯಾಕೆ ಅಸಮರ್ಥರಾಗಿದ್ದೇವೆಂದು ಹೇಳುತ್ತಿಲ್ಲ. ಮೂವತ್ತೈದು ವರ್ಷಗಳ ತಮ್ಮ ಆಡಳಿತೆಯಲ್ಲಿ ಗುತ್ತೇದಾರ ಬಂಡವಲದಾರರಾದ ಟಾಟಾ, ಬಿರ್ಲಾ, ಸಿಂಗಾನಿಯಾ ಮೊದಲಾದ 75 ಮನೆತನಗಳು ತಮ್ಮ ಬಂಡವಾಳವನ್ನು ಸಾವಿರ ಪಟ್ಟು ಹೆಚ್ಚಿಸಿ ಕೊಂಡಿರುವಾಗ, ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಲಕ್ಷಾವಧಿ ಜನ ಉಪವಾಸ—ವನವಾಸದಿಂದಿರುವಂಥ ಪರಿಸ್ಥಿತಿ ಯಾಕೆ ಉಂಟಾಗಿದೆ. ಅತಿ ಅಂತಸ್ತಿನ ಮನೆಗಳು ನಗರಗಳ ಗಗನವನ್ನು ಚುಂಬಿಸುತ್ತಿರುವಾಗ, ಗುಡಿಸಲಿನ ಆಶ್ರಯವನ್ನು ಕಾಣದ ಕೋಟ್ಯಾವಧಿ ಬಡಪಾಯಿಗಳ ಗತಿಯನ್ನು ವಿವರಿಸಲು ಅವರಿಗೆ ಸಾಧ್ಯವಾಗುತ್ತಿಲ್ಲ.

ಮೂವತ್ತೇಳನೆಯ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸುತ್ತಿರುವಾಗ ಸತ್ಯ, ಪ್ರೀತಿ, ಅನುಕಂಪ ಮತ್ತು ಶಾಂತಿಯ ಪಥದಿಂದ ಸರಿಯದಿರುವ ನಿರ್ಧಾರ ಕೈಗೊಳ್ಳಬೇಕೆಂದು ರಾಷ್ಟ್ರಾಧ್ಯಕ್ಷರು ಕರೆ ನೀಡಿದ್ದಾರೆ. ಈ ಕರೆ ಕಾಂಗ್ರೆಸ್ಸಿಗರಿಗೋ ಅಥವಾ ಸಾರ್ವಜನಿಕರಿಗಷ್ಟೆಯೋ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಕಾಂಗ್ರೆಸ್ ಆಡಳಿತೆಯಲ್ಲಿ ಕಾಂಗ್ರೆಸ್ಸಿಗರ ಸತ್ಯ – ಪ್ರೀತಿ – ಅನುಕಂಪಗಳಿಗೆ ಅರ್ಥವೇ ಬೇರೆ ಎಂಬುದು ದೇಶದಲ್ಲಿ ನಡೆಯುತ್ತಿರುವ ಜಾತೀಯ ಗಲಭೆ, ಛಿದ್ರಕಾರಿ ಶಕ್ತಿಗಳಿಂದ, ಕೊಲೆ—ಸುಲಿಗೆ, ದರೋಡೆ, ಮಹಿಳೆಯರ ಮಾನಭಂಗಗಳಿಂದ ಕಂಡು ಬರುತ್ತದೆ.

(8ನೇ ಪುಟ ನೋಡಿ)

ರೈತ ಸಂಘದ ಚಟುವಟಿಕೆಗಳು

ಕರ್ನಾಟಕ ಪ್ರಾಂತ ರೈತ ಸಂಘ

ರಾಯಚೂರು ಜಿಲ್ಲಾ ಪ್ರಥಮ ಸಮ್ಮೇಳನ

ಜುಲೈ ತಿಂಗಳ 28-29 ರಂದು ಕ. ಪ್ರಾಂತ ರೈತ ಸಂಘದ ರಾಯಚೂರು ಜಿಲ್ಲಾ ಪ್ರಥಮ ಸಮ್ಮೇಳನವು ರಾಯಚೂರಿನಲ್ಲಿ ಯಶಸ್ವಿಯಾಗಿ ನಡೆಯಿತು.

ದಿನಾಂಕ 28-7-84 ರಂದು ಕಾ| ಚಂದ್ರಶೇಖರ್ ಬಾಳೆ ಮುಂಜಾನೆ 10 ಗಂಟೆಗೆ ಧ್ವಜಾರೋಹಣ ಮಾಡಿದರು. 11 ಗಂಟೆಗೆ ರೈತ ಸಂಘದ ರಾಜ್ಯ ಸಮಿತಿ ಅಧ್ಯಕ್ಷರಾದ ಕಾ. ಪಿ. ರಾಮಚಂದ್ರರಾವ್ ಅವರು ಸಮ್ಮೇಳನವನ್ನು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಸ್ವಾಗತ ಸಮಿತಿ ಅಧ್ಯಕ್ಷರಾದ ಶ್ರೀ ಜಿ. ಅಮರೇಗೌಡ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಕಾ| ವಿ. ಎನ್. ಹಳಕಟ್ಟಿ ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಮತ್ತು ಕಾ| ಪಿ ಜಗನ್ನಾಥ ರಾಜ್ಯ ಸಮಿತಿ ಕಾರ್ಯದರ್ಶಿ ಆಗಮಿಸಿದ್ದರು.

ಸಿ.ಐ.ಟಿ.ಯು., ಎಸ್.ಎಫ್.ಐ., ಡಿ.ವೈ.ಎಫ್.ಐ, ಎ.ಐ.ಡಿ.ಡಬ್ಲ್ಯು.ಎ., ಕೆ.ಎಸ್.ಆರ್.ಟಿ.ಸಿ., ಎಂಪ್ಲಾಯಿಸ್ ಯೂನಿಯನ್‌ನ ಪ್ರತಿನಿಧಿಗಳು ಮತ್ತು ರಾಜ್ಯ ಸಮಿತಿ ಸದಸ್ಯ ಮತ್ತು ಬೆಂಗಳೂರು ಜಿಲ್ಲಾ ಸಮಿತಿ ಅಧ್ಯಕ್ಷರಾದ ಕಾ| ರಾಮಭದ್ರಯ್ಯ ಮುಂತಾದವರು ಶುಭ ಕೋರಿ ಮಾತನಾಡಿ ಸಮ್ಮೇಳನ ಯಶಸ್ವಿಯಾಗಲಿ ಎಂದು ಹಾರೈಸಿದರು. ಕಾ| ಚಂದ್ರಶೇಖರ ಬಾಳೆ ಸ್ವಾಗತಿಸಿದರು ಕಾ| ರಾಮನಗೌಡ ವಂದಿಸಿದರು.

ಜಿಲ್ಲೆಯ ಏಳು ತಾಲೂಕುಗಳಿಂದ 15 ಸಾವಿರ ಸದಸ್ಯರನ್ನು ಪ್ರತಿನಿಧಿಸಿ 258 ಜನ ರೈತ-ಕೃಷಿ ಕಾರ್ಮಿಕರು ಮತ್ತು 10 ಜನ ಮಹಿಳೆಯರು ಅಲ್ಲದೆ 12 ಜನ ವೀಕ್ಷಕರು ಸೌಹಾರ್ದ ಪ್ರತಿನಿಧಿಗಳು ಆಗಮಿಸಿದ್ದರು.

ಪ್ರತಿನಿಧಿಗಳ ಸಭೆಯನ್ನುದ್ದೇಶಿಸಿ ಕಾ. ವಿ. ಎನ್. ಹಳಕಟ್ಟಿ, ಪಿ. ಜಗನ್ನಾಥ್ ಮುಂತಾದವರು ಮಾತನಾಡಿ ರೈತ ಹೋರಾಟವನ್ನು ಪ್ರಬಲವಾಗಿ ರೂಪಿಸಬೇಕೆಂದು ಕರೆ ನೀಡಿದರು. ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾ. ಚಂದ್ರಶೇಖರ್ ಬಾಳೆ ಅವರು 23 ಪುಟದ ವರದಿಯನ್ನು ಸಮ್ಮೇಳನದ ಮುಂದೆ ಮಂಡಿಸಿದರು.

ಗೊತ್ತುವಳಿಗಳು

ಚರ್ಚೆಯ ಆಧಾರದ ಮೇಲೆ ಇಡೀ ಜಿಲ್ಲೆಗೆ ಸಂಬಂಧಿಸಿ 10 ಗೊತ್ತುವಳಿಗಳನ್ನು ತೆಗೆದುಕೊಳ್ಳಲಾಯಿತು.

1. ಜಿಲ್ಲೆಯನ್ನು ಬರಗಾಲ ಪ್ರದೇಶವೆಂದು ಘೋಷಿಸಿ ತುರ್ತು ಕ್ರಮ ತೆಗೆದುಕೊಳ್ಳುವುದು. ಬರಗಾಲವನ್ನು ತಡೆಯಲು ಅಂತರ ಜಲ, ಹಾಗೂ ಇತರ ನೀರಾವರಿಯನ್ನು ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆ ಬಲದಂಡೆ ಕಾಲುವೆಯನ್ನು ಜಾರಿಗೆ ತರಬೇಕು.

2. ರೈತರ ಬೆಳೆಗೆ ಬೆಂಬಲಿತ ಬೆಲೆ ನಿಗದಿ ಮಾಡಿ ಬೆಳೆಯನ್ನು ಸರಕಾರವೇ ಖರೀದಿಸುವಂತಾಗಬೇಕು.

3. ಸಹಕಾರಿ ಸಾಲ ಹೆಚ್ಚಿಸಬೇಕು. ಬಡ ರೈತರ ಸಾಲ ಮನ್ನಾ ಮಾಡಬೇಕು. ವಿಫಲ ಬಾವಿಯ ಸಾಲ ಮನ್ನಾ ಮುಂದುವರಿಸಬೇಕು. ಹೆಚ್ಚಿಗೆ ಗ್ರಾಮೀಣ ಬ್ಯಾಂಕುಗಳನ್ನು ತೆರೆಯಬೇಕು.

4. ಜಿಲ್ಲೆಯಲ್ಲಿರುವ ಪಡಾಭೂಮಿ ಸರಕಾರಿ ಅನುಪಯುಕ್ತ ಅರಣ್ಯ ಭೂಮಿಯನ್ನು ಭೂ ಹೀನರಿಗೆ ಹಂಚಬೇಕು

5. ಎಲ್ಲಾ ವಸತಿ ಹೀನರಿಗೆ ವಸತಿಯನ್ನು ಒದಗಿಸಬೇಕು. ಕೃಷಿ ಕಾರ್ಮಿಕರಿಗಾಗಿ ಕಾಮಗಾರಿ, ಡಿ.ಆರ್.ಡಿ.ಎಸ್. ಸ್ಕೀಮ್‌ಗಳನ್ನು ಎಲ್ಲಾ ಬಡವರಿಗೆ ವಿಸ್ತರಿಸಬೇಕು.

6. ನೀರಾವರಿ ಪ್ರದೇಶದಲ್ಲಿ ತೀವ್ರವಾಗಿರುವ ಸಮಸ್ಯೆಗಳನ್ನು ಬಗೆಹರಿಸಿ ಡ್ರೈಲ್ಯಾಂಡ್ ರೈತರಿಗೆ ಸರಿಯಾಗಿ ನೀರು ಒದಗಿಸಲು, ರಾಜಲ್ ಬಂಡಾ ಡೈವರ್ಶನ್ ಕಾಲುವೆಯನ್ನು ಕೈಗೆತ್ತಿಕೊಳ್ಳಬೇಕು. ಡಿಪ್-ಅಂಡ್-ಡ್ರಾ ಯೋಜನೆಯನ್ನು ಬೇಗನೆ ಮುಗಿಸಬೇಕು.

7. ಗ್ರಾಮೀಣ ಪ್ರದೇಶದಲ್ಲಿ ಪಡಿತರ ಪದ್ಧತಿಯನ್ನು ಜಾರಿಗೊಳಿಸಬೇಕು.

ನೂತನ ಪದಾಧಿಕಾರಿಗಳು

ಕಾ| ಚಂದ್ರಶೇಖರ್ ಬಾಳೆ ಅಧ್ಯಕ್ಷರು, ಕಾ| ಕಂಟೆಪ್ಪ ಉಪಾಧ್ಯಕ್ಷರು, ಕಾ| ಲಿಂಗಪ್ಪ ಪೂಜಾರ್ ಉಪಾಧ್ಯಕ್ಷರು, ಕಾ| ಬಿ. ಲಿಂಗಪ್ಪ ಪ್ರಧಾನಕಾರ್ಯದರ್ಶಿ, ಕಾ| ಆರ್. ಬಸವರಾಜ ಮತ್ತು ಎಚ್. ಎಂ ನಾಯಕ ಕಾರ್ಯದರ್ಶಿಗಳು, ಡಾ|| ಬಾಲಚಂದ್ರ, ಖಜಾಂಚಿ ಅಲ್ಲದೆ 15 ಜನ ಕೌನ್ಸಿಲ್ ಸದಸ್ಯರನ್ನು 21 ಜನ ಕಾರ್ಯಕಾರೀ ಸಮಿತಿ ಸದಸ್ಯರನ್ನು ಸಮ್ಮೇಳನವು ಆಯ್ಕೆ ಮಾಡಿತು.

29 ರ ಸಂಜೆ ಸಮ್ಮೇಳನದ ಅಂಗವಾಗಿ ಬೃಹತ್ ಬಹಿರಂಗ ಸಭೆ ನಡೆಯಿತು.

ದ. ಕನ್ನಡ ಜಿಲ್ಲಾ ರೈತ ಸಂಘದ ಸಭೆ

ಗ್ರಾಮ ಮಟ್ಟದಿಂದ ರೈತ ಸಂಘಟನೆ ಬಲಪಡಿಸಲು ನಿರ್ಧಾರ

ಕರ್ನಾಟಕ ಪ್ರಾಂತ ರೈತ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ಸಭೆಯು ತಾರೀಕು 9-8-84 ರಂದು ಜಿಲ್ಲಾ ಸಮಿತಿ ಅಧ್ಯಕ್ಷ ಕಾ. ಅಬ್ರಹಾಂ ಕರ್ಕಡ ಅವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಕರ್ನಾಟಕ ಪ್ರಾಂತ ರೈತ ಸಂಘದ ಮುಂದಾಳು ಎಂ. ಕೆ. ಭಟ್ ಮತ್ತು ಸಿ. ಪಿ ಐ. (ಎಂ) ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ. ಆರ್. ಶ್ರೀಯಾನ್ ಸಭೆಯಲ್ಲಿ ಉಪಸ್ಥಿತರಿದ್ದು ಸೂಕ್ತ ಸಲಹೆ, ಮಾರ್ಗದರ್ಶನಗಳನ್ನಿತ್ತರು. ಜಿಲ್ಲಾ ಸಮಿತಿಯ ಕಾರ್ಯದರ್ಶಿಯವರು ಪ್ರಾಂತ ರೈತ ಸಂಘದ ರಾಜ್ಯ ಸಮಿತಿಯ ನಿರ್ಣಯಗಳನ್ನು ವಿವರಿಸಿದರು. ಗ್ರಾಮ ಮಟ್ಟದಿಂದಲೇ ಮುಖಂಡತ್ವ, ಸಂಘಟನೆ, ಸಾಮೂಹಿಕ ಹೋರಾಟ ಮತ್ತು ಸಾಮೂಹಿಕ ನೆಲೆಗಳನ್ನು ಸ್ಥಾಪಿಸುವುದರ ಮೂಲಕ ಬಲಿಷ್ಠ ತಳಹದಿ ಇರುವ ವ್ಯಾಪಕವಾದ ರೈತ ಸಂಘಟನೆಯನ್ನು ಕಟ್ಟುವುದರ ಅವಶ್ಯಕತೆಯನ್ನು ಕಾ. ಎಂ. ಕೆ. ಯವರು ಒತ್ತಿ ಹೇಳಿದರು. ದರಕಾಸ್ತು ಭೂಮಿಗೆ ಸಂಬಂಧಪಟ್ಟ ಹೋರಾಟದ ಮುಂದಿನ ಹಂತದಲ್ಲಿ ಜಿಲ್ಲೆಯಾದ್ಯಂತ ವ್ಯಾಪಕವಾದ ತೀವ್ರ ಚಳುವಳಿಯನ್ನು ನಡೆಸಲೂ ಕರೆ ಇತ್ತರು.

ಹೋರಾಟ ನಡೆಸುವುದರೊಂದಿಗೆ ಸಂಘಟನೆಯನ್ನು ಕಟ್ಟುವುದಕ್ಕೆ ಅತೀ ಹೆಚ್ಚಿನ ಆದ್ಯತೆ ಕೊಡಬೇಕೆಂದು ಹೇಳಿದ ಕಾ. ಕೆ. ಆರ್. ಶ್ರೀಯಾನ್ ಅವರು ಸಂಘಟನೆಯು ಮಾಡಿರುವ ತೀರ್ಮಾನಗಳನ್ನು ಜಾರಿಗೊಳಿಸುವುದು, ಮೇಲಿನ ಸಮಿತಿ ಹಾಗೂ ಕೆಳ ಸಮಿತಿಗಳೊಳಗೆ ಸಂಬಂಧವನ್ನು ಗಟ್ಟಿ ಮಾಡುವುದು, ಸಂಘಟನೆಯನ್ನು ಮುಂದುವರಿಸಲು ಅತೀ ಅಗತ್ಯವಾಗಿರುವ ನಿಧಿಯನ್ನು ಕೂಡಿಸುವುದು ಇವೇ ಮೊದಲಾದ ಕೆಲಸಗಳಿಗೆ ಗಂಭೀರವಾಗಿ ಗಮನವೀಯದಿದ್ದರೆ ಮುನ್ನಡೆಯುವುದು ಅಸಾಧ್ಯ ಎಂದರು. ಗ್ರಾಮೀಣ ಜನತೆಯನ್ನು ಸಂಘಟಿಸದೆ ಪ್ರಜಾಪ್ರಭುತ್ವ ಚಳುವಳಿಯು ಮುನ್ನಡೆಯುವುದು ಅಸಾಧ್ಯ ಎಂದ ಕಾ. ಶ್ರೀಯಾನ್ ಬಲಿಷ್ಠ ಸಂಘಟನೆಯನ್ನು ಕಟ್ಟಲು ಕರೆ ಇತ್ತರು.

ತೀರ್ಮಾನಗಳು

ಚರ್ಚೆಯ ನಂತರ ಮುಂದಿನ ವರ್ಷಕ್ಕೆ ಅಂದರೆ 1984–85ನೇ ಸಾಲಿಗೆ ಜಿಲ್ಲೆಯಲ್ಲಿ ಮೂವತ್ತು ಸಹಸ್ರ (30,000) ಸದಸ್ಯರನ್ನು ಸೇರಿಸುವುದೆಂದೂ, ಇನ್ನೂ ಅರವತ್ತು ಮೇಲ್ಪಟ್ಟು ಗ್ರಾಮ ಸಮಿತಿಗಳನ್ನು ರೂಪಿಸುವುದೆಂದೂ, ಎಲ್ಲಾ ತಾಲೂಕು ಸಮಿತಿಗಳನ್ನು ಪುನರ್ ಸಂಘಟಿಸುವುದೆಂದೂ, ಸಭೆಯು ತೀರ್ಮಾನಿಸಿತು. ಜಿಲ್ಲೆಯ ಎಲ್ಲಾ ಎಂಟು ತಾಲೂಕುಗಳಲ್ಲಿ ಗ್ರಾಮ ಮಟ್ಟದ ಕಾರ್ಯಕರ್ತರಿಗೆ ವಿಶೇಷ ತರಬೇತಿ ನೀಡಲು ತೀರ್ಮಾನಿಸಲಾಯಿತು. ಒಂದರಿಂದ ಎರಡು ದಿನಗಳ ವರೆಗೆ ನಡೆಯಲಿರುವ ಸುಮಾರು ಮೂವತ್ತು ತರಬೇತಿ ಶಿಬಿರಗಳಲ್ಲಿ ಒಟ್ಟು ಗ್ರಾಮ ಮಟ್ಟದ 1100 (ಒಂದು ಸಾವಿರದ ಒಂದ ನೂರು) ಕಾರ್ಯಕರ್ತರಿಗೆ ತರಬೇತಿ ನೀಡುವುದೆಂದೂ ತೀರ್ಮಾನಿಸಲಾಯಿತು.

ದ. ಕ. ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದಲ್ಲಿ ಬಡ ಕೃಷಿಕೂಲಿಗಾರ ಮಹಾಲಿಂಗಮಣಿಯಾಣಿ ಎಂಬುವನ ಮನೆಯನ್ನು ಕಾಂಗ್ರೆಯ ಮುಖ್ಯ ಕಾರ್ಯಕರ್ತ ಬೆಟ್ಟ ವೆಂಕಪ್ಪಯ್ಯ ಮತ್ತಿತರರು ನಾಶ ಮಾಡಿ ಒಂದು ವರ್ಷವಾಗುತ್ತಾ ಬಂದರೂ ಪೋಲೀಸರು ಮನೆ ಮುರಿದವರ ಮೇಲೆ ಕೇಸು ಹಾಕದೆ ಇದೀಗ ಮನೆ ಮಾಡುಕಳಕೊಂಡವರ ಮೇಲೆ ಕೇಸು ಹಾಕುವುದರಲ್ಲಿದ್ದಾರೆ. ಈ ಅನ್ಯಾಯವನ್ನು ಪ್ರತಿಭಟಿಸಿ 17–8–84 ರಂದು ಸುಳ್ಯ ಮತ್ತು ಪುತ್ತೂರು ಪೋಲೀಸ್ ಕಛೇರಿಗಳೆದುರು ಸಿ ಪಿ. ಐ. (ಎಂ) ಮತ್ತು ಅದರ ಸಾಮೂಹಿಕ ಸಂಘಟನೆಗಳು ನಡೆಸಲಿರುವ ಭಾರೀ ಸಾಮೂಹಿಕ ಸತ್ಯಾಗ್ರಹಕ್ಕೆ ಜಿಲ್ಲಾ ಸಮಿತಿಯು ಪೂರ್ಣ ಬೆಂಬಲ ಸಾರಿತು.

○

ದೊಡ್ಡಬಳ್ಳಾಪುರ

ರೈತ ಸಂಘದ ಸಭೆ

ಕರ್ನಾಟಕ ಪ್ರಾಂತ ರೈತ ಸಂಘದ ದೊಡ್ಡಬಳ್ಳಾಪುರ ತಾಲ್ಲೂಕು ಸಮಿತಿಯ ಕಾರ್ಯಕರ್ತರ ಸಭೆಯು ದಿನಾಂಕ 11-8-84 ರಂದು ಕಾ| ನಾರಾಯಣಗೌಡರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ರೈತರ ಈ ಕೆಳಕಂಡ ಸಮಸ್ಯೆಗಳನ್ನು ಚರ್ಚಿಸಿ ತೀರ್ಮಾನಿಸಿತು.

ಜೂನ್ 11 ರ ಪಿಕೆಟಿಂಗ್‌ನ ನಂತರ ತಾಲ್ಲೂಕಿನಲ್ಲಿ ರೈತ ಸಂಘದ ಪ್ರಭಾವ ಹೆಚ್ಚಾಗಿದ್ದು. ವಿಧವೆಯರ ಮಾಸಾಶನ, ಬಗರುಹುಕುಂ ಸಾಗುವಳಿದಾರರ ಅರ್ಜಿಗಳನ್ನು, ವಸತಿಗೆ ಸಂಬಂಧಿಸಿದ ಅರ್ಜಿಗಳನ್ನು ತಾಲ್ಲೂಕು ಕಛೇರಿಗೆ ಸಲ್ಲಿಸಿದ್ದು ಶೀಘ್ರ ಇತ್ಯರ್ಥ ಪಡಿಸಲು ಒತ್ತಾಯ ಪಡಿಸಬೇಕೆಂದು ಮತ್ತು ಗ್ರಾಮಗಳಿಗೆ ಜಾಥಾ ಮೂಲಕ ಪ್ರಚಾರ ನಡೆಸುತ್ತ, ಹಾಗೇ ಸದಸ್ಯತ್ವ ನೊಂದಾಯಿಸುವ ಕೆಲಸವನ್ನು ಮಾಡಬೇಕೆಂದೂ, ಈ ಕಾರ್ಯಕ್ರಮ ಮುಗಿದ ಕೂಡಲೆ ಸೆಪ್ಟೆಂಬರ್ 17 ರಂದು ದೊಡ್ಡಬಳ್ಳಾಪುರ ತಾಲ್ಲೂಕು ಸಮ್ಮೇಳನ ನಡೆಸಬೇಕೆಂದು ತೀರ್ಮಾನಿಸಲಾಯ್ತು, ಸಭೆಯಲ್ಲಿ ಜಿಲ್ಲಾ ಸಮಿತಿಯ ಅಧ್ಯಕ್ಷರಾದ ಸಿ. ರಾಮಭದ್ರಯ್ಯ, ಟಿ. ಎನ್. ಬಾಲಾಜಿಯವರು ಮಾತನಾಡಿ ಸಂಘಟನೆಯನ್ನು ತಾಲ್ಲೂಕಿನ ಪ್ರತಿ ಹಳ್ಳಿಗೂ ವಿಸ್ತರಿಸುವಂತೆ ಕಾರ್ಯಕರ್ತರು ಕೆಲಸ ಮಾಡಬೇಕೆಂದು ಕರೆ ನೀಡಿದರು.

★

ಗೌರಿಬಿದನೂರು

ರೈತರ ಸಮಾವೇಶ

ಭದ್ರಾ ಜಲಾಶಯದಿಂದ ಕೋಲಾರ ಜಿಲ್ಲೆಯ ನಾಲ್ಕು ತಾಲ್ಲೂಕುಗಳಾದ ಗೌರಿಬಿದನೂರು, ಗುಡಿಬಂಡೆ, ಬಾಗೇಪಲ್ಲಿ ಮತ್ತು ಚಿಕ್ಕಬಳ್ಳಾಪುರಗಳಿಗೆ ನೀರನ್ನು ಒದಗಿಸಬೇಕೆಂದು ಇದರ ಬಗ್ಗೆ ರೈತರನ್ನು ಮತ್ತು ಕೃಷಿ ಕಾರ್ಮಿಕರನ್ನು ಸಂಘಟಿಸಲು ತಾ|| 9.8.84 ರಂದು ಗೌರಿಬಿದನೂರು ಪುರಭವನದಲ್ಲಿ ತಾಲ್ಲೂಕಿನ ರೈತರ ಒಂದು ಸಮಾವೇಶ

(6ನೇ ಪುಟ ನೋಡಿ)

ಪೊಲಿಟ್‌ಬ್ಯೂರೋ ಹೇಳಿಕೆ

35 ವರ್ಷಗಳ ಯೋಜನೆ - ಪಾಠ ಕಲಿಯದ ಕಾಂಗ್ರೆಸ್ (ಐ)

ನವದೆಹಲಿಯಲ್ಲಿ ಆಗಸ್ಟ್ 6ಮತ್ತು 7ರಂದು ಸಭೆ ಸೇರಿದ ಸಿ. ಪಿ. ಐ (ಎಂ) ನ ಪೊಲಿಟ್ ಬ್ಯೂರೋ ಇತ್ತೀಚಿನ ಆರ್ಥಿಕ ಹಾಗೂ ರಾಜಕೀಯ ಚಟುವಟಿಕೆಗಳನ್ನು ಚರ್ಚಿಸಿತು. ಇನ್ನು ಕೆಲವೇ ತಿಂಗಳುಗಳಲ್ಲಿ ನಡೆಯಲಿರುವ ಲೋಕಸಭಾ ಚುನಾವಣೆಗಳ ಮೇಲೆ ತಮ್ಮ ಪ್ರಭಾವವನ್ನು ನಿಸ್ಸಂದೇಹವಾಗಿಯೂ ಬೀರಲಿರುವ ಬೆಳವಣಿಗೆಗಳು ಇವು.

ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯು ಇತ್ತೀಚಿನ ಸಭೆಯಲ್ಲಿ ಅಂಗೀಕರಿಸಿದ ಏಳನೇ ಪಂಚವಾರ್ಷಿಕ ಯೋಜನೆಯು ನಿಲುವು ಪತ್ರ ಆಳುವ ಪಕ್ಷ ಕಳೆದ ಆರು ಯೋಜನೆಗಳ ಶೋಚನೀಯ ಕಾರ್ಯ ನಿರ್ವಹಣೆಯಿಂದ ಏನೇನೂ ಪಾಠ ಕಲಿತಿಲ್ಲ ಎಂಬುದನ್ನು ತೋರಿಸುತ್ತದೆ. ಕಳೆದ 35 ವರ್ಷಗಳ ಯೋಜನೆಗಳ ಅವಧಿಯಲ್ಲಿ ಯೋಜನೆಯ ಬಗ್ಗೆ ಮೂಲಭೂತ ನಿಲುವು ಮತ್ತು ವಿವಿಧ ವಲಯಗಳನ್ನು ಕುರಿತಂತೆ ಧೋರಣೆಗಳು ಮೇಲ್ತುದಿಯಲ್ಲಿರುವ ಹಿಡಿಯಷ್ಟು ಮಂದಿಯನ್ನು ಮತ್ತಷ್ಟು ಶ್ರೀಮಂತರನ್ನಾಗಿಸಿ, ಅಪಾರ ಜನಸಮೂಹವನ್ನು ಅವ್ಯಾಹತವಾಗಿ ಬಡವರನ್ನಾಗಿಸುತ್ತಾ ಬಂದಿವೆ. ಏಳನೇ ಯೋಜನೆಯ ಕುರಿತಾದ ನಿಲುವು ಮತ್ತು ಧೋರಣೆಗಳೂ ಇದಕ್ಕಿಂತ ಬೇರೆಯೇನೂ ಆಗಿಲ್ಲ. ಆದ್ದರಿಂದ ಆಳುವ ಪಕ್ಷ ಮತ್ತು ಅದರ ಧೋರಣೆಗಳನ್ನು ಎಡ ಮತ್ತು ಪ್ರಜಾಪ್ರಭುತ್ವವಾದೀ ವಿರೋಧ ಪಕ್ಷಗಳು ತಮ್ಮ ಚುನಾವಣಾ ಪ್ರಚಾರದಲ್ಲಿ ವಿರೋಧಿಸಬೇಕಾಗಿದೆ ಮತ್ತು ಅವನ್ನು ಬಯಲಿಗೆಳೆಯಬೇಕಾಗಿದೆ ಎಂಬುದು ಸ್ಪಷ್ಟ. ಜಮ್ಮು ಮತ್ತು ಕಾಶ್ಮೀರದಲ್ಲಿ ಚುನಾಯಿತ ನ್ಯಾಷನಲ್ ಕಾನ್ಫರೆನ್ಸ್ ಸರಕಾರವನ್ನು ವಜಾ ಮಾಡಿದುದಕ್ಕೆ ಪ್ರತಿಭಟಿಸಿ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಿಂದ ಹೊರ ನಡೆದ ನಾಲ್ಕು ಕಾಂಗ್ರೆಸ್ಸೇತರ ಮುಖ್ಯ ಮಂತ್ರಿಗಳ ಕ್ರಮವನ್ನು ಪೊಲಿಟ್‌ಬ್ಯೂರೋ ಮೆಚ್ಚಿಕೊಂಡಿದೆ. ಈ ನಾಲ್ಕು ರಾಜ್ಯ ಸರಕಾರಗಳ ಅಧಿಕಾರಿಗಳನ್ನು ಮಂಡಳಿಯ ಸಭೆಯಿಂದ ಹೊರಗೆ ಕಳುಹಿಸಿದ ಪ್ರಧಾನ ಮಂತ್ರಿಗಳ "ಅಭೂತಪೂರ್ವ" ಕ್ರಮವನ್ನು ಪೊಲಿಟ್‌ಬ್ಯೂರೋ ಬಲವಾಗಿ ಖಂಡಿಸಿದೆ. ಇದು ಮತ್ತು ಸಭೆಯಿಂದ ಹೊರ ನಡೆದುದಕ್ಕಾಗಿ ಈ ನಾಲ್ಕು ಮುಖ್ಯ ಮಂತ್ರಿಗಳನ್ನು ಖಂಡಿಸುವ ಸಭೆಯ ಔಪಚಾರಿಕ ನಿರ್ಣಯ ಆಳುವ ಪಕ್ಷ ಕಾಂಗ್ರೆಸ್ಸೇತರ ಪಕ್ಷಗಳ ಮುಖಂಡತ್ವದಲ್ಲಿರುವ ರಾಜ್ಯ ಸರ್ಕಾರಗಳೊಂದಿಗೆ "ಘರ್ಷಣೆ" ಗಿಳಿಯುವ ಒಂದು ಧೋರಣೆಯನ್ನು ಅನುಸರಿಸಲಿದೆ ಎಂಬುದನ್ನು ತೋರಿಸಿಕೊಟ್ಟಿವೆ.

ಎಲ್ಲಾರಾಜ್ಯಗಳಮೇಲೆಹಲ್ಲೆ

ಪೊಲಿಟ್‌ಬ್ಯೂರೋ ಎಂಟನೇ ಆರ್ಥಿಕ ಆಯೋಗದ ಶಿಫಾರಸುಗಳನ್ನು ಗಮನಿಸಿತು. ಈ ಶಿಫಾರಸುಗಳಲ್ಲಿ ರಾಜ್ಯಗಳ ಪ್ರತಿನಿಧಿಗಳು ಮಂಡಿಸಿದ್ದ ಹಲವು ಪ್ರಶ್ನೆಗಳ ಬಗ್ಗೆ ವಾಸ್ತವಿಕ ದೃಷ್ಟಿಯ ಸೂಚನೆ ಕಂಡು ಬಂದಿದೆ. ಆದರೆ ಕೇಂದ್ರ ಸರ್ಕಾರ ಅವನ್ನು ಪ್ರಸ್ತುತ ವರ್ಷದಲ್ಲಿ ಜಾರಿಗೊಳಿಸಿದರೆ ಅದು ಕೇಂದ್ರ ಹಾಗೂ ರಾಜ್ಯಗಳ ಬಜೆಟ್‌ಗಳನ್ನು ಅಸ್ತವ್ಯಸ್ತ ಗೊಳಿಸುವುದೆಂಬ ಕುಂಟು ನೆವ ಮುಂದೆ ಮಾಡಿ ಜಾರಿಗೊಳಿಸಲು ನಿರಾಕರಿಸಿದೆ. ಆದರೆ ಈ ವಾದ ಇದುವರೆಗಿನ ಎಲ್ಲಾ ಆಚರಣೆಗಳಿಗೆ ವಿರುದ್ಧವಾದುದು. ಏಳನೇ ಅಥವಾ ಅದಕ್ಕಿಂತಲೂ ತಡವಾಗಿ ಕೊಟ್ಟ ಶಿಫಾರಸುಗಳನ್ನು ಈ ವರೆಗಿನ ಎಲ್ಲಾ ವರ್ಷಗಳಲ್ಲಿ ಮೊದಲ ವರ್ಷದಲ್ಲೇ ಜಾರಿಗೊಳಿಸಲಾಗಿತ್ತು.

ಕೇಂದ್ರ ಸರ್ಕಾರದ ತನ್ನಿಷ್ಟಕ್ಕನುಸಾರವಾಗಿ ಕೈಗೊಂಡ ಈ ಕ್ರಮದಿಂದಾಗಿ ರಾಜ್ಯಗಳು ಒಟ್ಟಾಗಿ 2000 ಕೋಟಿ ರೂಗಳ ವಂಚನೆ ಮಾಡಿದಂತಾಗಿದೆ. ಸುಮಾರಾಗಿ ಎಲ್ಲಾ ರಾಜ್ಯಗಳಿಗೆ ಇದರ ಒಂದು ಭಾಗ ಸಿಗುತ್ತಿತ್ತು. ಯಾವ ರಾಜ್ಯಕ್ಕೂ ನಷ್ಟವಾಗುತ್ತಿರಲಿಲ್ಲ. ಆದ್ದರಿಂದ ಇದು ಎಲ್ಲಾ ರಾಜ್ಯಗಳ ಮೇಲೆ, ಅವುಗಳ ಸರ್ಕಾರಗಳ ಬಣ್ಣ ಯಾವುದೇ ಇರಲಿ, ನಡೆಸಿದ ಹಲ್ಲೆ.

ಕಾಶ್ಮೀರ 370ನೇ ಕಾಲಮ್ ರದ್ದಾಗ ಬಾರದು

ಕಾಶ್ಮೀರದಲ್ಲಿ ಫರೂಕ್ ಅಬ್ದುಲ್ಲಾ ಸರ್ಕಾರವನ್ನು ಕಿತ್ತು ಹಾಕಿದ ರಾಜ್ಯಪಾಲರ ಕ್ರಮದ ವಿರುದ್ಧ ಎಲ್ಲಾ ಪ್ರಜಾಪ್ರಭುತ್ವವಾದೀ ಶಕ್ತಿಗಳು ಒಕ್ಕೊರಲಿನಿಂದ ಪ್ರತಿಭಟಿಸಿದುದಕ್ಕಾಗಿ ಪೊಲಿಟ್ ಬ್ಯೂರೋ ತನ್ನ ತೃಪ್ತಿ ವ್ಯಕ್ತ ಪಡಿಸಿದೆ. ಆದರೆ ಪ್ರತಿಭಟನೆಯಲ್ಲಿ ದನಿಗೂಡಿಸಿದ ಬಿ. ಜೆ. ಪಿ ಯಂತಹ ಕೆಲವರು ದೇಶದ ಸಂವಿಧಾನದ 370ನೇ ಕಾಲಂನಲ್ಲಿ ಕಾಶ್ಮೀರಕ್ಕೆ ಇತ್ತಿರುವ ವಿಶೇಷ ಅವಕಾಶಗಳನ್ನು ರದ್ದುಗೊಳಿಸಬೇಕೆಂದು ಒತ್ತಾಯಿಸುತ್ತಿರುವುದನ್ನೂ ಪೊಲಿಟ್‌ಬ್ಯೂರೋ ಗಮನಿಸಿದೆ. ಸಿ. ಪಿ. ಐ. (ಎಂ) ಮತ್ತು ಇತರ ಎಡ ಮತ್ತು ಪ್ರಜಾ ಪ್ರಭುತ್ವ ವಾದೀ ಪಕ್ಷಗಳು ಈ ಕಾಲಂನ್ನು ರದ್ದು ಮಾಡುವ ಯಾವುದೇ ಪ್ರಯತ್ನ ದೇಶದ ಐಕ್ಯತೆಯನ್ನು ಅಸ್ತವ್ಯಸ್ತ ಗೊಳಿಸಬೇಕೆಂದಿರುವವನ್ನು ಬಲಗೊಳಿಸುತ್ತಿದೆ ಎಂದು ಅಭಿಪ್ರಾಯ ಪಡುತ್ತವೆ.

ಪಂಜಾಬ್ : ಮಾತು - ಕೃತಿಯ ಅಂತರ

ಪಂಜಾಬಿನಲ್ಲಿ "ಸಾಂತ್ವನಾ ಸ್ಪರ್ಶ" ನೀಡಬೇಕೆಂದು ಪ್ರಧಾನ ಮಂತ್ರಿ ಮತ್ತು ಆಕೆಯ ಸಹೋದ್ಯೋಗಿಗಳು ಸದಾ ಉದುರಿಸುತ್ತಿರುವ ಮಾತುಗಳಿಗೂ ಅವರ ಆಚರಣೆಗೂ ಯಾವ ತಾಳಮೇಳವೂ ಇಲ್ಲದಂತಾಗಿದೆ ಪಂಜಾಬಿಗೆ ಭೇಟಿ ನೀಡಿದ ಎಂ. ಪಿ. ಗಳು ಮಂಡಿಸಿದ ಈ ಕೆಳಗಿನ ಸಲಹೆಗಳಿಗೆ ಪೊಲಿಟ್‌ಬ್ಯೂರೋ ಬೆಂಬಲ ನೀಡಿದೆ.

1. ಸೇನೆಯನ್ನು ಸ್ವರ್ಣ ಮಂದಿರದಿಂದ ವಾಪಾಸು ಪಡೆಯಬೇಕು

2. "ಕಾರ್ ಸೇವಾ"ವನ್ನು ಸಿಖ್ ಕೋಮಿನ ಗೌರವಾನ್ವಿತ ಸಂತ ಖಡಕ್ ಸಿಂಗ್‌ರಿಗೆ ನಿರ್ವಹಿಸಿ ಕೊಡಬೇಕು.

3. ಪಂಜಾಬಿನ ಸಮಸ್ಯೆಗೆ ಒಂದು ರಾಜಕೀಯ ಪರಿಹಾರವನ್ನು ಕಂಡು ಹಿಡಿಯಬೇಕು.

ಪಂಜಾಬ್ ಸಮಸ್ಯೆಯ ಪರಿಹಾರಕ್ಕೆ ದೇಶಾದ್ಯಂತ ಎಲ್ಲಾ ಜಾತ್ಯತೀತ ಪ್ರಜಾಪ್ರಭುತ್ವವಾದೀ ಪಕ್ಷಗಳ ಸಹಕಾರ ಅಗತ್ಯ. ಅಕಾಲೀ ನಾಯಕತ್ವ ಈ ಸಮಸ್ಯೆಯ ಪರಿಹಾರಕ್ಕೆ ನೆರವು ನೀಡಲಿಲ್ಲ ಎಂಬ ಸಿಪಿಐ (ಎಂ) ನ ಅಭಿಪ್ರಾಯವನ್ನು ಪೊಲಿಟ್‌ಬ್ಯೂರೋ ಪುನರುಚ್ಚರಿಸಿದೆ. ನಮ್ಮ ಪಕ್ಷ ಮತ್ತು ಜಾತ್ಯತೀತ ಪ್ರಜಾಪ್ರಭುತ್ವವಾದೀ ಪಕ್ಷಗಳು ಅಕಾಲೀ ನಾಯಕತ್ವ ತಮ್ಮನ್ನು ಭಿಂದ್ರನ್‌ವಾಲೇ ಭಯೋತ್ಪಾದಕರಿಂದ ಸಂಪೂರ್ಣವಾಗಿ ಪ್ರತ್ಯೇಕಿಸಿಕೊಳ್ಳಬೇಕೆಂದು ದೃಢ ಮಾತುಗಳಲ್ಲಿ, ಸದಾ ಹೇಳುತ್ತಾ ಬಂದಿದ್ದವು. ಪಂಜಾಬಿನ ದುರಂತದ ಪ್ರಮುಖ ಜವಾಬ್ದಾರಿ ಕಾಂಗ್ರೆಸ್ಸಿನದ್ದೇ ಆಗಿದ್ದರೂ ಅಕಾಲೀ ನಾಯಕತ್ವದ ಈ ವಿಫಲತೆಯೂ ಬಹಳಷ್ಟು ಕಾರಣ ಈ ಘಟ್ಟದಲ್ಲಾದರೂ ಅಕಾಲೀ ನಾಯಕತ್ವ 1) ಸ್ವರ್ಣ ಮಂದಿರವನ್ನು ಕಾನೂನಿನ ಶಕ್ತಿಗಳ ವಿರುದ್ಧ, ಹಿಂದೂಗಳ ವಿರುದ್ಧ, ಮಾತ್ರವಲ್ಲ, ತೀವ್ರಗಾಮಿಗಳೊಂದಿಗೆ ಸಂಬಂಧವಿಡದ ಸಿಖ್ಖರ ವಿರುದ್ಧ ಕೂಡಾ ಅವ್ಯಾಹತವಾಗಿ ಸಶಸ್ತ್ರ ಹಲ್ಲೆಗೆ ತಯಾರಿ ನಡೆಸಲು ಉಪಯೋಗಿಸುವವರೆಗೆ ನಡೆದ ಸಮಾಜ-ವಿರೋಧೀ ಚಟುವಟಿಕೆಗಳಿಗೆ ಅಸಮ್ಮತಿ ವ್ಯಕ್ತಪಡಿಸಲು (2) ಭಿಂದ್ರನ್‌ವಾಲೆ ಮತ್ತು ಅವನ ಜನಗಳು ಮಾಡಿದಂತೆ ಗುರುದ್ವಾರಗಳನ್ನು ಕ್ರಿಮಿನಲ್ ವ್ಯಕ್ತಿಗಳಿಗೆ ಆಶ್ರಯ ನೀಡಲು, ಶಸ್ತ್ರಾಸ್ತ್ರ ಸಂಗ್ರಹಿಸಲು ಉಪಯೋಗಿಸದಂತೆ ಸಾಧ್ಯವಾದುದನ್ನೆಲ್ಲಾ ಮಾಡುವುದಾಗಿ (3) ಯಾವುದೇ ರಾಜಕೀಯ ಪಕ್ಷದ ಚಟುವಟಿಕೆಗಳಿಗೆ ಕೇಂದ್ರವಾಗಿ ಯಾವುದೇ ಗುರುದ್ವಾರಾವನ್ನು ಬಳಸುವುದಿಲ್ಲವಾಗಿ ಮತ್ತು (4) ವಿವಿಧ ಕೋಮುಗಳ ನಡುವೆ ಐಕ್ಯತೆ ಮತ್ತು ಸಾಮರಸ್ಯಕ್ಕಾಗಿ ಹೋರಾಡುವಲ್ಲಿ ತಾವು ಪ್ರಜಾಪ್ರಭುತ್ವವಾದೀ ಪಕ್ಷಗಳ ಜತೆಗೂಡುವುದಾಗಿ ಸ್ಪಷ್ಟಪಡಿಸಲು ವಿಫಲವಾದರೆ ಸಮಸ್ತ ದೇಶದ ಜಾತ್ಯತೀತ ಪ್ರಜಾಪ್ರಭುತ್ವವಾದೀ ಶಕ್ತಿಗಳ ಸಹಾನುಭೂತಿಯನ್ನು ಇನ್ನು ಮುಂದೆಯೂ ಕಳಕೊಳ್ಳುತ್ತಾ ಹೋಗುತ್ತದೆ.

ಅಸ್ಸಾಂ - ಎಲ್ಲಾ ಮತದಾರರ ಮೇಲೆ ಹಲ್ಲೆ

ಅಸ್ಸಾಂನಲ್ಲಿ ಹಲವು ಲಕ್ಷ ಮತದಾರರ ಮತದಾನದ ಹಕ್ಕನ್ನು ಇಷ್ಟಬಂದಂತೆ ರದ್ದು ಮಾಡುವ ಪ್ರಯತ್ನಗಳ ಬಗ್ಗೆ ಪೊಲಿಟ್‌ಬ್ಯೂರೋ ತನ್ನ ಗಂಭೀರ ಆತಂಕವನ್ನು ವ್ಯಕ್ತಪಡಿಸಿದೆ. ಕೇಂದ್ರದ ಆಳುವ ಪಕ್ಷ ಇದಕ್ಕೆ ಈಗಾಗಲೇ ಸಮ್ಮತಿ ನೀಡಿದೆ. ರಾಜ್ಯದ ಹಲವು ವಿರೋಧ ಪಕ್ಷಗಳು ಮತ್ತು ಅಸ್ಸಾಂ ಚಳುವಳಿಯ ನಾಯಕರು ಇದನ್ನು ಸ್ವೀಕರಿಸಿರುವುದು ವಿಷಾದನೀಯ ಇದು ಅಸ್ಸಾಂನ ಅಲ್ಪ ಸಂಖ್ಯಾತ ಕೋಮುಗಳ ಮೇಲೆ ಮಾತ್ರವಲ್ಲ, ಬಹುಸಂಖ್ಯಾತ ಕೋಮಿಗೂ ಸೇರಿದಂತೆ

(6ನೇ ಪುಟ ನೋಡಿ)

ತರುಣರಿರ, ಎದ್ದೇಳಿ !

ಹೋಗುತಿದೆ ಹಳೆಕಾಲ, ಹೊಸಕಾಲ ಬರುತಲಿದೆ,
ಬರುತಲಿದೆ ಹೊಸದೃಷ್ಟಿ ಹೊಸ ಬಯಕೆಗಳಲಿ
ಹೋಗುತಿದೆ ಹಳೆಬಾಳು, ಹೊಸ ಬಾಳು ಬರುತಲಿದೆ
ಬರುತಲಿದೆ ಕುದಿಗೊಂಡು ತರುಣರೆದೆಗಳಲಿ
ತರುಣರಿರ, ಎದ್ದೇಳಿ ಎಚ್ಚರಗೊಳ್ಳಿ ಕೇಳಿ !

ಬೀಸುತಿದೆ ಪಶ್ಚಿಮದ ರಸಪೂರ್ಣ ಹೊಸಗಾಳಿ
ಭಾರತದ ಬಣಗು ಬಾಳ್ಮರವನಲುಗಾಡಿ;
ಉದುರುತಿವೆ ಮುದಿ ಕಡ್ಡಿ ತರಗು ಹಣ್ಣೆಲೆಗಳೆಲ್ಲಾ
ನಲಿಯುತಿವೆ ನಳನಳಿಸಿ ಹೊಸ ಚಿಗುರು ಮೂಡಿ
ತರುಣರಿರ ಎದ್ದೇಳಿ ! ಎಚ್ಚರಗೊಳ್ಳಿ ! ನೋಡಿ

ಮೊನ್ನೆ ಮೊನ್ನೆಯವರೆಗೆ ಪಶ್ಚಿಮದ ಹೊಲೆಗೇರಿ,
ಇಂದು ನಂದನವಾಗಿ ನಗುತಲಿದೆ ರಷ್ಯಾ
ಗರ್ಜಿಸಲು ತೊಡಗಿಹುದು ಕೇಸರಂಗಳ ಕೆದರಿ
ಇದುವರೆಗೆ ಮಲಗಿ ನಿದ್ರಿಸುತ್ತಿದ್ದ ಏಷ್ಯಾ
ತರುಣರಿರ ಎದ್ದೇಳಿ ! ಎಚ್ಚರಗೊಳ್ಳಿ ! ಕೇಳಿ

ಹಳೆಮತದ ಕೊಳೆಯೆಲ್ಲ ಹೊಸಮತಿಯ ಹೊಳೆಯಲ್ಲಿ
ಕೊಚ್ಚಿ ಹೋಗಲಿ, ಬರಲಿ ವಿಜ್ಞಾನ ಬುದ್ಧಿ
ವೇದ ಪ್ರಮಾಣತೆಯ ಮರು ಮರೀಚಿಕೆಯಲ್ಲಿ
ನೀರರಸಿ ಕೆಡದಿರಲಿ ಸ್ವಾತಂತ್ರ್ಯ ಸಿದ್ಧಿ
ತರುಣರಿರ, ಎದ್ದೇಳಿ ! ಎಚ್ಚರಗೊಳ್ಳಿ ! ಬಾಳಿ !

ಹೊಸಬಾಳ ಗೀತೆಯನು ದಿಕ್ಕು ದೆಸೆ ಬಿರಿವಂತೆ
ಕೊರಳೆತ್ತಿ, ಕೈಯೆತ್ತಿ, ದನಿಯೆತ್ತಿ ಹಾಡಿ
ನೇರ ನಡೆದರೆ ನಿಮ್ಮ ತಡೆಯುವವರಾರಿಲ್ಲ
ಜಗವೆ ಹಿಂಜರಿಯುವುದು ನಿಡುದಾರಿ ನೀಡಿ
ತರುಣರಿರ ಎದ್ದೇಳಿ ! ಎಚ್ಚರಗೊಳ್ಳಿ !

— ಕು. ವೆಂ. ಪು.

[1935 ರಲ್ಲಿ ಬರೆದದ್ದು]

ಆರ್ಥಿಕ ಸಮೀಕ್ಷೆ

ಕೇಂದ್ರದ ಪಕ್ಷಪಾತ ಧೋರಣೆ - ಪಶ್ಚಿಮ ಬಂಗಾಳಕ್ಕೆ ಭಾರೀ ಅನ್ಯಾಯ

— ಆರ್. ಚಂದ್ರ

ಇತ್ತೀಚಿನ ವರ್ಷಗಳಲ್ಲಿ ಕೇಂದ್ರ ರಾಜ್ಯ ಸಂಬಂಧ ತೀವ್ರ ಹದಗೆಡುತ್ತಿದೆ. ಗುತ್ತೇದಾರಿ ಬಂಡವಾಳಶಾಹಿ ನೇತೃತ್ವದ ಬಂಡವಾಳಶಾಹಿ-ಭೂ ಮಾಲೀಕ ಶಕ್ತಿಗಳನ್ನು ಪ್ರತಿನಿಧಿಸುತ್ತಿರುವ ಇಂದಿರಾ ಕಾಂಗ್ರೆಸ್ ಕೇಂದ್ರದಲ್ಲಿಯೂ ಹೆಚ್ಚಿನ ರಾಜ್ಯಗಳಲ್ಲಿಯೂ ದೀರ್ಘ ಕಾಲದಿಂದ ಅಧಿಕಾರದಲ್ಲಿದ್ದರೂ, ಸಂವಿಧಾನದ ಚೌಕಟ್ಟಿನೊಳಗಾದರೂ ಸ್ನೇಹ, ಸಹಕಾರ, ಸೌಹಾರ್ದತೆಯ ಕೇಂದ್ರ-ರಾಜ್ಯ ಸಂಬಂಧವನ್ನಿಟ್ಟುಕೊಳ್ಳಲು ಸೋತಿದೆ. ರಾಜ್ಯಗಳಿಗೆ ಸಂಬಂಧಿಸಿದ ಭಾಷೆ, ಗಡಿ, ನದಿ ನೀರು ವಿವಾದಗಳನ್ನಾಗಲೀ, ಬಡತನ, ನಿರುದ್ಯೋಗ, ನಿರಕ್ಷರತೆ, ಅನಾರೋಗ್ಯಗಳನ್ನು ನಿವಾರಿಸುವ ಆರ್ಥಿಕ ಅಭಿವೃದ್ಧಿಯ ಸಮಸ್ಯೆಗಳನ್ನಾಗಲೀ, ನಿರಾಶ್ರಿತ ಮನೆದಾರರ; ಗುಡ್ಡಗಾಡು ಜನರ ಸಮಸ್ಯೆಗಳನ್ನಾಗಲೀ, ವಿಧ್ವಂಸಕ ದಂಗೆಕಾರಿ ಸಮಸ್ಯೆಗಳನ್ನಾಗಲೀ ಪರಿಹರಿಸಲು ಕಾಂಗ್ರೆಸ್ ಸರಕಾರ ಸೋತಿದೆ.

ಅಸ್ಥಿರತೆಯಲ್ಲಿ ರಾಜ್ಯ ಸರಕಾರಗಳು

ಇಂದಿರಾ ಕಾಂಗ್ರೆಸ್ ಪಕ್ಷವೇ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಭಿನ್ನಮತೀಯರ ಗುಂಪುಗಾರಿಕೆಯಿಂದ ಮತ್ತು ಕೇಂದ್ರದ ನಿರಂತರ ಹಸ್ತಕ್ಷೇಪದಿಂದ ಈ ರಾಜ್ಯ ಸರಕಾರಗಳು ತೀರಾ ಅಸ್ಥಿರತೆಯಲ್ಲಿವೆ. ವಿರೋಧ ಪಕ್ಷಗಳು ಅಧಿಕಾರದಲ್ಲಿದ್ದ ಕೇರಳ [ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದ ಎಡ - ಪ್ರಜಾಪ್ರಭುತ್ವವಾದಿ ರಂಗ], ಜಮ್ಮು- ಕಾಶ್ಮೀರ (ನ್ಯಾಶನಲ್ ಕಾನ್ಫರೆನ್ಸ್), ಸಿಕ್ಕಿಂ (ಸಿಕ್ಕಿಂ ಜನತಾ), ಪಾಂಡಿಚೇರಿ [ಡಿ.ಎಂ.ಕೆ.] ರಾಜ್ಯ ಸರಕಾರಗಳ ವಿರುದ್ಧ ಮತ್ತು ವಿರೋಧ ಪಕ್ಷಗಳು ಈಗಲೂ ಅಧಿಕಾರದಲ್ಲಿರುವ ಪ. ಬಂಗಾಳ, ತ್ರಿಪುರ (ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದ ಎಡರಂಗ), ಕರ್ನಾಟಕ (ಜನತಾ), ಆಂಧ್ರ ಪ್ರದೇಶ [ತೆಲುಗು ದೇಶ] ಮತ್ತು ತಮಿಳುನಾಡು (ಎ.ಐ.ಡಿ.ಎಂ.ಕೆ.) ರಾಜ್ಯ ಸರಕಾರಗಳ ವಿರುದ್ಧ ಇಂದಿರಾ ಕಾಂಗ್ರೆಸ್ ಕೇಂದ್ರ ಸರಕಾರ ವಿನಾಕಾರಣವಾಗಿ ವೈರ ಭಾವಹೊಂದಿದೆ. ಈ ರಾಜ್ಯಗಳಿಗೆ ಇಂದಿರಾ ಕಾಂಗ್ರೆಸ್ ಪಕ್ಷದ ಬಾಲಬಡುಕರನ್ನೇ ರಾಜ್ಯಪಾಲರುಗಳನ್ನಾಗಿ ನೇಮಿಸಿ ಅವರ ಮೂಲಕ ಸಂವಿಧಾನದನ್ವಯ ಚುನಾಯಿತವಾದ ರಾಜ್ಯ ಸರಕಾರಗಳನ್ನು ಉರುಳಿಸಲು ಸದಾಕಾಲ ಪಿತೂರಿ ಹೂಡಲಾಗುತ್ತಿದೆ. ಈ ರಾಜ್ಯಗಳಿಗೆ ನೆರೆ-ಬರಗಾಲ ಪರಿಹಾರ ಕೊಡಲು, ಆರ್ಥಿಕ ಅಭಿವೃದ್ಧಿಗೆ ನೆರವು ನೀಡಲು, ಆಹಾರ ಧಾನ್ಯಗಳ ಮತ್ತು ಅವಶ್ಯಕ ವಸ್ತುಗಳ ಸರಬರಾಜು ಮಾಡಲು, ವಿಧ್ವಂಸಕ ಕೃತ್ಯಗಳನ್ನೂ ಮತೀಯ ಗಲಭೆಗಳನ್ನೂ ಹತ್ತಿಕ್ಕಲು ಬೇಕಾದ ಕೇಂದ್ರ ರಕ್ಷಣಾ ಪಡೆಗಳನ್ನು ಸಮಯಕ್ಕೆ ಸರಿಯಾಗಿ ಒದಗಿಸಲು ಇಂದಿರಾ ಕಾಂಗ್ರೆಸ್ ಕೇಂದ್ರ ಸರಕಾರ ಪಕ್ಷಪಾತ ಧೋರಣೆಯನ್ನು ಅನುಸರಿಸುತ್ತಿದೆ.

ಕೇಂದ್ರ - ರಾಜ್ಯ ಸಂಬಂಧದಲ್ಲಿ ಬಿಕ್ಕಟ್ಟು

ಪರಿಣಾಮ ? ಕೇಂದ್ರ-ರಾಜ್ಯ ಸಂಬಂಧದಲ್ಲಿ ಬಿಕ್ಕಟ್ಟು, ಭಾರತದ ಒಕ್ಕೂಟದಲ್ಲಿ ಬಲಹೀನತೆ, ರಾಷ್ಟ್ರೀಯ ಐಕ್ಯತೆಗೆ ಮತ್ತು ಕೋಮು ಸೌಹಾರ್ದತೆಗೆ ಅಪಾಯ, ಆರ್ಥಿಕ ಅಭಿವೃದ್ಧಿಯಲ್ಲಿ ಹಿನ್ನಡೆ. ಅಸ್ಸಾಂ, ಪಂಜಾಬ್, ಈಶಾನ್ಯ ಭಾರತ ಪ್ರದೇಶಗಳಲ್ಲಿ ಈಗ ಭುಗಿಲೆದ್ದಿರುವ ಪ್ರತ್ಯೇಕತಾ ಚಳುವಳಿ, ಮತೀಯ ಗಲಭೆಗಳು ಇಂದಿರಾ ಕಾಂಗ್ರೆಸ್ ಕೇಂದ್ರ ಸರಕಾರದ ಪಕ್ಷಪಾತ ಧೋರಣೆಯ ದುಷ್ಪರಿಣಾಮಗಳು. ಆದರೆ, ಇವುಗಳಿಂದ ಇಂದಿರಾ ಸರಕಾರ ಯಾವ ಪಾಠ ಕಲಿತಂತಿಲ್ಲ.

8ನೇ ಹಣಕಾಸು ಆಯೋಗ

8 ನೇ ಹಣಕಾಸು ಆಯೋಗದ ಸಲಹೆಗಳನ್ನು 1984-85 ರ ವರ್ಷದಿಂದಲೇ ಜ್ಯಾರಿಗೊಳಿಸದಿರುವ ಕೇಂದ್ರ ಸರಕಾರದ ಇತ್ತೀಚಿನ ನಿರ್ಧಾರವು ಸಂವಿಧಾನಕ್ಕೂ, ಸಂಪ್ರದಾಯಕ್ಕೂ ವಿರುದ್ಧವಾಗಿದೆ. ಮತ್ತು ಪ. ಬಂಗಾಳವೂ ಸೇರಿದಂತೆ ಹೆಚ್ಚಿನ ರಾಜ್ಯ ಸರಕಾರಗಳಿಗೆ ತುಂಬಾ ಅನ್ಯಾಯವಾಗಿದೆ. ಕೇಂದ್ರ-ರಾಜ್ಯಗಳ ಸಂಬಂಧದಲ್ಲಿ ಹೊಸ ಬಿಕ್ಕಟ್ಟು ಉಂಟಾಗಿದೆ. ಪಾರ್ಲಿಮೆಂಟಿಗೆ ಸಧ್ಯದಲ್ಲಿಯೇ ಚುನಾವಣೆ ನಡೆಯಲಿರುವುದರಿಂದ, 8 ನೇ ಹಣಕಾಸು ಆಯೋಗದ ಸಲಹೆಗಳನ್ನು ಜ್ಯಾರಿಗೊಳಿಸಿದರೆ ರಾಜ್ಯ ಸರಕಾರಗಳ-ಮುಖ್ಯವಾಗಿ ವಿರೋಧಿ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯ ಸರಕಾರಗಳ ಹಣಕಾಸು ಪರಿಸ್ಥಿತಿ ಸುಧಾರಿಸುವ ಪ್ರಯೋಜನವನ್ನು ತಪ್ಪಿಸಲಿಕ್ಕಾಗಿಯೇ ಕೇಂದ್ರ ಈ ಪಕ್ಷಪಾತದ ನಿರ್ಧಾರ ಕೈಗೊಂಡಿದೆ !

ಕೇಂದ್ರ-ರಾಜ್ಯ ಸರಕಾರಗಳೊಳಗೆ ಆಡಳಿತ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ ರಾಷ್ಟ್ರದ ಹಣಕಾಸು ಸಂಪನ್ಮೂಲಗಳನ್ನು (ಪ್ರತ್ಯಕ್ಷ-ಪರೋಕ್ಷ ತೆರಿಗೆಗಳು, ಸಾಲ, ಉಳಿತಾಯ, ಇತ್ಯಾದಿ) ಹಂಚಿಕೊಳ್ಳುವ ವಿಧಾನಗಳನ್ನು ಐದು ವರ್ಷಗಳಿಗೊಮ್ಮೆ ಹಣಕಾಸು ಆಯೋಗ ಸ್ವತಂತ್ರವಾಗಿ ಪರಿಶೀಲಿಸಿ ನಿರ್ಧರಿಸಬೇಕೆಂದು ಸಂವಿಧಾನದಲ್ಲಿ ಹೇಳಲಾಗಿದೆ. ಹಣಕಾಸು ಆಯೋಗದ ಸಲಹೆಗಳನ್ನು ಅಂಗೀಕರಿಸಿ ಅನುಷ್ಠಾನಕ್ಕೆ ತರುವುದು ಸಂವಿಧಾನದನ್ವಯ ಕೇಂದ್ರ ಸರಕಾರದ ಜವಾಬ್ದಾರಿಯಾಗಿದೆ. ಈ ಸಂವಿಧಾನಾತ್ಮಕ-ಸಂಪ್ರದಾಯದಂತೆ, 8 ನೇ ಹಣಕಾಸು ಆಯೋಗವನ್ನು ಮಾಜಿ ಕೇಂದ್ರ ಹಣಕಾಸು ಮಂತ್ರಿ ವೈ. ಬಿ. ಚವ್ಹಾಣ್‌ರ ಅಧ್ಯಕ್ಷತೆಯಲ್ಲಿ ಜೂನ್, 1982 ರಲ್ಲಿ ನೇಮಿಸಲಾಯಿತು. ಅಕ್ಟೋಬರ್ 31, 1983 ರ ಒಳಗಾಗಿ ಈ ಆಯೋಗ ತನ್ನ ಅಂತಿಮ ವರದಿಯನ್ನು ಸಲ್ಲಿಸಬೇಕಾಗಿತ್ತು. ಆದರೆ, ಆಯೋಗ ನಿಗದಿತ ಸಮಯಕ್ಕಿಂತ ಹೆಚ್ಚು ಕಾಲ ತೆಗೆದುಕೊಂಡು ಏಪ್ರಿಲ್, 1984 ರಲ್ಲಿ ತನ್ನ ಅಂತಿಮ ವರದಿಯನ್ನು ಕೇಂದ್ರ ಸರಕಾರಕ್ಕೆ ಸಲ್ಲಿಸಿತು. ಅಂತಿಮ ವರದಿಯಲ್ಲಿ ತನ್ನ ಸಲಹೆಗಳು 1984-85 ನೇ ವರ್ಷದಿಂದಲೇ ಜ್ಯಾರಿಗೆ ಬರಬೇಕೆಂದೂ 1989-90 ರವರೆಗೆ ಮುಂದುವರಿಯಬೇಕೆಂದೂ ಆಯೋಗ ಸ್ಪಷ್ಟವಾಗಿ ಸಲಹೆ ಮಾಡಿದೆ.

ಕೇಂದ್ರದ ಪಕ್ಷಪಾತ

ಇದೇ ಆಯೋಗ ನವಂಬರ್, 1983 ರಲ್ಲಿ ತನ್ನ ನಡುಗಾಲದ ವರದಿಯಲ್ಲಿ 1984-85 ನೇ ವರ್ಷದಲ್ಲಿ ಕೇಂದ್ರ ಮತ್ತು ರಾಜ್ಯಗಳೊಳಗೆ ಹಣಕಾಸು ವಿತರಣೆ 7 ನೇ ಆಯೋಗದ ಸಲಹೆಗಳ ಆಧಾರದಲ್ಲಿಯೇ ಮಾಡಬೇಕೆಂದು ಶಿಫಾರಸು ಮಾಡಿತ್ತು. ಈ ನೆಪದಿಂದ ಕೇಂದ್ರ ಸರಕಾರ 8 ನೇ ಹಣಕಾಸು ಆಯೋಗದ ಸಲಹೆಗಳನ್ನು 1984-85 ರ ವರ್ಷದಿಂದ ಅನುಷ್ಠಾನಕ್ಕೆ ತರಲು ನಿರಾಕರಿಸಿದೆ. ಕಾರಣ 8 ನೇ ಆಯೋಗದ ಅಂತಿಮ ವರದಿಯ ಸಲಹೆಗಳಂತೆ ಹಣಕಾಸು ಹಂಚುವುದರಿಂದ ಹೆಚ್ಚಿನ ರಾಜ್ಯಗಳಿಗೆ ಪ್ರಯೋಜನವಾಗುವುದು. ಅವುಗಳಲ್ಲಿ ಪ. ಬಂಗಾಳ, ಆಂಧ್ರ ಪ್ರದೇಶ, ತ್ರಿಪುರ, ಕರ್ನಾಟಕ ರಾಜ್ಯಗಳೂ ಇವೆ.

ಪಾರ್ಲಿಮೆಂಟ್ ಚುನಾವಣೆ ಸಮೀಪಿಸುತ್ತಿರುವಾಗ ವಿರೋಧ ಪಕ್ಷಗಳು ಅಧಿಕಾರದಲ್ಲಿ ಇರುವ ರಾಜ್ಯ ಸರಕಾರಗಳಿಗೆ ಹೆಚ್ಚಿನ ಹಣಕಾಸು ಸಂಪನ್ಮೂಲಗಳನ್ನು ಕೇಂದ್ರ ಸರಕಾರ ಹಂಚಲು ಆತುರವಾಗಿಲ್ಲ. ಈ ರಾಜ್ಯಗಳು ಇನ್ನಷ್ಟು ಆರ್ಥಿಕ ಮುಗ್ಗಟ್ಟಿನಿಂದ ಜನರ ವಿಶ್ವಾಸ ಕಳೆದುಕೊಂಡ! ಮುಂದಿನ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ ಓಟು ಗಿಟ್ಟಿಸಿಕೊಂಡು ಪುನಃ ಕೇಂದ್ರದಲ್ಲಿ ಅಧಿಕಾರಕ್ಕೆ ಬರಬಹುದು ಎಂಬ ದುರಾಸೆ. ಪಕ್ಷದ ಅಧಿಕಾರ ದಾಹದ ಸ್ವಾರ್ಥದಿಂದ ದೇಶದ, ರಾಜ್ಯಗಳ ಜನರ ಕಲ್ಯಾಣವನ್ನು ಕಡೆಗಣಿಸುವ ಇಂದಿರಾ ಸರಕಾರದ ಧೋರಣೆಯು ಸಂವಿಧಾನಕ್ಕೂ, ಸಂಪ್ರದಾಯಕ್ಕೂ ವಿರೋಧ ಮತ್ತು ಅನ್ಯಾಯ. ಹಣಕಾಸು ಆಯೋಗದ ಅಂತಿಮ ವರದಿಯು ಕೇಂದ್ರ ಸರ್ಕಾರಕ್ಕೆ ತಲುಪಿರುವಾಗ, ಆಯೋಗದ ನಡುಗಾಲದ ಸಲಹೆಯನ್ನೇ 1984—85ರ ವರ್ಷಕ್ಕೆ ಅನುಷ್ಠಾನಗೊಳಿಸುವ ಕೇಂದ್ರ ಸರಕಾರದ ನಿರ್ಧಾರವು ಹಠಮಾರಿತನದ್ದು ಪಕ್ಷಪಾತದ್ದೂ ಆಗಿದೆ.

ಕೇಂದ್ರ ಸರಕಾರದ ಈ ಪಕ್ಷಪಾತ ಧೋರಣೆಯನ್ನು ಪ. ಬಂಗಾಳದ ಎಡರಂಗ ಸರ್ಕಾರವು ಕಟುವಾಗಿ ಟೀಕಿಸಿದೆ. ಈ ರಾಜ್ಯದ ಮಂತ್ರಿಮಂಡಳ ಮತ್ತು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದ ಎಡರಂಗ ಸಮಿತಿ ಕೇಂದ್ರ ಸರ್ಕಾರಕ್ಕೆ ತೀವ್ರ ಪ್ರತಿಭಟನೆಯನ್ನು ತಿಳಿಸಿವೆ ಮತ್ತು ನ್ಯಾಯಕ್ಕಾಗಿ ಸುಪ್ರೀಂ ಕೋರ್ಟಿಗೆ ಹೋಗುವುದಾಗಿ ಎಚ್ಚರಿಸಿವೆ. ಕರ್ನಾಟಕ, ಆಂಧ್ರ ಪ್ರದೇಶ ರಾಜ್ಯ ಸರಕಾರಗಳೂ, ಇಂದಿರಾ ಕಾಂಗ್ರೆಸ್‌ನ ಮಿತ್ರಪಕ್ಷವಾದ ಎ. ಐ. ಡಿ. ಎಂ. ಕೆ. ಯ ತಮಿಳುನಾಡು ರಾಜ್ಯ ಸರ್ಕಾರವೂ, ಇಂದಿರಾ ಕಾಂಗ್ರೆಸ್ ಅಧಿಕಾರದಲ್ಲಿರುವ ಕೇರಳ, ಬಿಹಾರ, ಮತ್ತಿತರ ರಾಜ್ಯ ಸರ್ಕಾರಗಳೂ ಕೇಂದ್ರ ಸರ್ಕಾರದ ಪಕ್ಷಪಾತ ಧೋರಣೆಗೆ ತಮ್ಮ ತೀವ್ರ ವಿರೋಧ ಮತ್ತು ಅಸಮಾಧಾನ ವ್ಯಕ್ತ ಮಾಡಿವೆ.

8ನೇ ಹಣಕಾಸು ಆಯೋಗದ ಸಲಹೆಗಳನ್ನು 1984-85 ರಿಂದಲೇ ಜಾರಿಗೆ ತಾರದಿರಲು ಕೇಂದ್ರ ಸರ್ಕಾರ ಮುಂದೊಡ್ಡಿದ ಕುಂಟು ನೆಪಗಳನ್ನು ಪ. ಬಂಗಾಳದ ಎಡರಂಗ ಸರ್ಕಾರದ ವಿತ್ತ ಮಂತ್ರಿ ಡಾ || ಅಶೋಕ ಮಿತ್ರ ಖಂಡಿಸಿದ್ದಾರೆ. ಕೇಂದ್ರದಿಂದ ರಾಜ್ಯಗಳಿಗೆ ಮತ್ತು ಪರಸ್ಪರ ರಾಜ್ಯಗಳೊಳಗೆ ಹಣಕಾಸು ಹಂಚಿಕೆಯನ್ನು 8ನೇ ಆಯೋಗದ ಹೊಸ ಸಲಹೆಗಳ ಆಧಾರದಲ್ಲಿ 1984—85 ರಿಂದಲೇ ಮಾಡುವುದರಿಂದ ಪ್ರಸಕ್ತ ವರ್ಷದ ಆರ್ಥಿಕ ಅಭಿವೃದ್ಧಿ ಕಾರ್ಯಗಳು ಅಸ್ತವ್ಯಸ್ತಗೊಳ್ಳುವುವು. ಈಗಿನ ಹಣಕಾಸು ವರ್ಷದಲ್ಲಿ ಈಗಾಗಲೇ ನಾಲ್ಕು ತಿಂಗಳು ಕಳೆದಿರುವುದರಿಂದ ಆಯೋಗದ ಸಲಹೆಗಳನ್ನು ಮುಂದಿನ ಹಣಕಾಸು ವರ್ಷದಿಂದಲೇ ಜಾರಿಗೆ ತರುವುದು ಸೂಕ್ತ ಎಂಬ ಕೇಂದ್ರ ಸರ್ಕಾರದ ವಾದ. ಆದರೆ, 1969 ರಲ್ಲಿ ಇಂದಿರಾ ಗಾಂಧಿಯೇ ಪ್ರಧಾನಿಯಾಗಿದ್ದಾಗ, ಅವರ ಪಕ್ಷವೇ ಅಧಿಕಾರದಲ್ಲಿದ್ದಾಗ, ಆಗಿನ ಹಣಕಾಸು ಆಯೋಗ ಆ ವರ್ಷದ ಜುಲೈ ತಿಂಗಳಲ್ಲಿ ತನ್ನ ವರದಿಯನ್ನು ನೀಡಿದ್ದರೂ, ಆಗಸ್ಟ್‌ನಲ್ಲಿಯೇ ಅದನ್ನು ಅಂಗೀಕರಿಸಿ ಅನುಷ್ಠಾನಕ್ಕೆ ತರಲಾಗಿತ್ತು ಎಂದು ಡಾ || ಮಿತ್ರ ನೆನಪಿಸುತ್ತಾರೆ. ಆಗ ಇಲ್ಲದ ನೆಪ ಈಗ ಯಾಕೆ ಎಂದು ಡಾ || ಮಿತ್ರ ಕೇಳುತ್ತಾರೆ. 8ನೇ ಹಣಕಾಸು ಆಯೋಗ 1984ರ ಏಪ್ರಿಲ್‌ನಲ್ಲಿ ತನ್ನ ಅಂತಿಮ ವರದಿಯನ್ನು ಸಲ್ಲಿಸಿ ಅದರ ಸಲಹೆಗಳನ್ನು 1984—85ರ ವರ್ಷದಿಂದಲೇ ಅನುಷ್ಠಾನಕ್ಕೆ ತರಬೇಕೆಂದು ಸಲಹೆ ಮಾಡಿದಾಗ, ಆಯೋಗಕ್ಕೆ 1984—85ರ ಕೇಂದ್ರ ಹಾಗೂ ಹೆಚ್ಚಿನ ರಾಜ್ಯಗಳ ಮುಂಗಡ ಪತ್ರಗಳ ವಿವರ ತಿಳಿದಿತ್ತೆಂದೂ, ಈ ವರ್ಷದ ಯೋಜನೆಯ ಅಭಿವೃದ್ಧಿ ವೆಚ್ಚಗಳ ವಿವರವೂ ತಿಳಿದಿತ್ತೆಂದೂ ಡಾ|| ಮಿತ್ರ ಹೇಳುತ್ತಾರೆ.

ಕೇಂದ್ರದ ಈ ನಿರ್ಣಯದಿಂದ ಹಣಕಾಸು ಕೊರತೆಯಿರುವ ಹನ್ನೊಂದು ರಾಜ್ಯಗಳಿಗೆ, ಮುಖ್ಯವಾಗಿ ಪ. ಬಂಗಾಳಕ್ಕೆ ಭಾರೀ ಅನ್ಯಾಯವಾಗಿದೆ. ಹಣಕಾಸು ಹಂಚುವಿಕೆಯಲ್ಲಿ ಕೇಂದ್ರವು ರೂ 2000 ಕೋಟಿ ಯಷ್ಟು ರಾಜ್ಯಗಳಿಗೆ ನೀಡದೆ ತಾನೇ ಇಟ್ಟುಕೊಂಡಿದೆ. ಪರಿಣಾಮವಾಗಿ ನ್ಯಾಯವಾಗಿ ಸಿಗಬೇಕಾದ ಹಣಕಾಸು ಸಂಪನ್ಮೂಲಗಳಿಂದ ರಾಜ್ಯಗಳು ವಂಚಿಸಲ್ಪಟ್ಟಿವೆ. ಕೆಲವು ರಾಜ್ಯಗಳ ನಷ್ಟವನ್ನು ಈ ಕೆಳಗೆ ತಿಳಿಸಲಾಗಿದೆ.

(1984 - 85 ರಲ್ಲಿ)

ಪ. ಬಂಗಾಳ	ರೂ. 269 ಕೋಟಿ.
ಕರ್ನಾಟಕ	ರೂ. 150 ಕೋಟಿ
ಉ. ಪ್ರದೇಶ	ರೂ. 119 ಕೋಟಿ
ಬಿಹಾರ	ರೂ. 90 ಕೋಟಿ
ಆಂಧ್ರ ಪ್ರದೇಶ	ರೂ. 80 ಕೋಟಿ

(ಆಧಾರ: ಡೆಕ್ಕನ್ ಹೆರಾಲ್ಡ್ 4-8-84 ಆರ್. ವೆಂಕಟಾ ಚಾರಿ ಅವರ ಲೇಖನ)

8ನೇ ಆಯೋಗದ ಸಲಹೆಗಳಂತೆ 1984-85 ರಲ್ಲಿ ಕೇಂದ್ರದಿಂದ ಸಹಾಯಧನ ಸಿಗದಿದ್ದರೆ, ಕೊರತೆಯ ಹನ್ನೊಂದು ರಾಜ್ಯಗಳು ರಿಸರ್ವ್ ಬ್ಯಾಂಕಿನಿಂದ ಶೇ 13 ರಷ್ಟು ಬಡ್ಡಿ ಕೊಟ್ಟು ಸಾಲ ಪಡೆಯಬೇಕು. ಅಥವಾ ತಮ್ಮ ಆಡಳಿತ ಅಭಿವೃದ್ಧಿ ವೆಚ್ಚಗಳನ್ನು ಕಡಿತಗೊಳಿಸಬೇಕು ಇವೆರಡರಿಂದಲೂ ಈ ರಾಜ್ಯಗಳು ಇನ್ನಷ್ಟು ಆರ್ಥಿಕ ಮುಗಟ್ಟಿಗೊಳಗಾಗುವುವು. ಪಾರ್ಲಿಮೆಂಟ್ ಚುನಾವಣೆಯು ಸಮೀಪಿಸುತ್ತಿರುವಾಗ ಇಂದಿರಾ ಕಾಂಗ್ರೆಸ್ ಕೇಂದ್ರ ಸರ್ಕಾರ ರಾಜ್ಯಗಳನ್ನು ಬಲಹೀನಗೊಳಿಸಿ ಕೇಂದ್ರವನ್ನು ಬಲಗೊಳಿಸಲು ಉದ್ದೇಶಿಸಿದೆ. ಸರ್ವಾಧಿಕಾರಿ ಪ್ರವೃತ್ತಿಗೆ ಇದೂ ಒಂದು ಉದಾಹರಣೆ. ಕೇಂದ್ರ ಸರ್ಕಾರದ ಧೋರಣೆಯನ್ನು ಪ್ರತಿಭಟಿಸಲು ಜನ ಜಾಗೃತಿ ಗೊಳಿಸಬೇಕು. ರಾಜ್ಯಗಳ ಸ್ವಾಯತ್ತತೆಯನ್ನು ಮರಳಿ ಪಡೆಯಬೇಕು.

ಪ. ಬಂಗಾಳ ಎಡರಂಗ ಸರ್ಕಾರದ ಮೇಲಿನ

ಆರೋಪಗಳು ಎಷ್ಟು ನಿಜ ?

ಪ ಬಂಗಾಳದಲ್ಲಿ ಯೋಜನಾ ಕಾರ್ಯಕ್ರಮಗಳ ಜಾರಿಯಲ್ಲಿ ವೈಫಲ್ಯತೆಯುಂಟಾಗಿದೆ ಎಂಬುದರ ಕುರಿತು ಶ್ರೀಮತಿ ಇಂದಿರಾಗಾಂಧಿ, ಪ್ರಣಬ್ ಮುಖರ್ಜಿ ಅವರುಗಳು ಮತ್ತು ಇತರ ಕಾಂಗ್ರೆಸ್ ನಾಯಕರುಗಳು ಎಡರಂಗ ಸರ್ಕಾರದ ವಿರುದ್ಧವಾಗಿ ಮಿಥ್ಯಾರೋಪಗಳ, ನಿಂದನೆಗಳ, ಅಪಪ್ರಚಾರಗಳ ಮಹಾಪೂರವನ್ನೇ ಹರಿಸುತ್ತಿದ್ದಾರೆ. ಆಹಾರಗಳ ಉತ್ಪಾದನೆಯಲ್ಲಿ ಪ. ಬಂಗಾಳವು ಹಿಂದೆ ಬಿದ್ದು ಕೇಂದ್ರದತ್ತ ಭಿಕ್ಷಾಪಾತ್ರೆ ಚಾಚುತ್ತಿದೆಯೆಂದು ಈ ನಾಯಕರುಗಳು ಪರಿಹಾಸ್ಯ ಮಾಡುತ್ತಿದ್ದಾರೆ. ಆದರೆ ನಿಜ ಸಂಗತಿಗಳು ಇವರ ಆರೋಪಗಳು ಸುಳ್ಳು ಎಂಬುದನ್ನು ಸಾಬೀತು ಗೊಳಿಸುತ್ತವೆ. ಕಳೆದ 3 ವರ್ಷಗಳಲ್ಲಿ ಮುಖ್ಯ ಬೆಳೆಗಳಾದ ಅಕ್ಕಿ, ಗೋಧಿ, ದವಸಗಳು, ಎಣ್ಣೆ ಕಾಳುಗಳು, ಆಲೂಗಡ್ಡೆ, ಈರುಳ್ಳಿ ಮುಂತಾದವುಗಳ ಉತ್ಪಾದನೆಯಲ್ಲಿ ಎಡರಂಗ ಸರಕಾರವು ಸಾಧಿಸಿರುವ ಪ್ರಗತಿಯನ್ನು ಇನ್ನಿತರ ಕಾಂಗ್ರೆಸ್ ಆಡಳಿತದ ರಾಜ್ಯಗಳೊಂದಿಗೆ ಹೋಲಿಸಿ ನೋಡೋಣ.

ಕಳೆದ ಮೂರು ವರ್ಷಗಳಲ್ಲಿ [1981-82, 1982-83, 1983-84] ಆಹಾರ ಬೆಳೆಯಲ್ಲಿ ರಾಜ್ಯಗಳು ಸಾಧಿಸಿರುವ ಪ್ರಗತಿ

ರಾಜ್ಯದ ಹೆಸರು	ಉತ್ಪಾದನೆಯಲ್ಲಿ ಹೆಚ್ಚಳ
1. ಉತ್ತರ ಪ್ರದೇಶ	54 ಲಕ್ಷ 60 ಸಾವಿರ ಟನ್
2. ಪ. ಬಂಗಾಳ	32 ಲಕ್ಷ 40 ಸಾವಿರ ಟನ್
3. ಮಧ್ಯ ಪ್ರದೇಶ	21 ಲಕ್ಷ 40 ಸಾವಿರ ಟನ್
4. ಪಂಜಾಬ್	15 ಲಕ್ಷ 80 ಸಾವಿರ ಟನ್
5. ಒರಿಸ್ಸಾ	13 ಲಕ್ಷ 20 ಸಾವಿರ ಟನ್
6. ಬಿಹಾರ್	10 ಲಕ್ಷ 70 ಸಾವಿರ ಟನ್
7. ಆಂಧ್ರ ಪ್ರದೇಶ	10 ಲಕ್ಷ 30 ಸಾವಿರ ಟನ್
8. ಹರ್‍ಯಾಣ	9 ಲಕ್ಷ ಟನ್
9. ಮಹಾರಾಷ್ಟ್ರ	6 ಲಕ್ಷ 20 ಸಾವಿರ ಟನ್

ಇದೇ ಅವಧಿಯಲ್ಲಿ ಕೆಳಗಿನ 3 ರಾಜ್ಯಗಳಲ್ಲಿ ಆಹಾರ ಉತ್ಪಾದನೆಯಲ್ಲಿ ತೀವ್ರವಾದ ಕುಸಿತವುಂಟಾಗಿದೆ.

1. ತಮಿಳುನಾಡು (ಎ.ಐ.ಡಿ.ಎಂ.ಕೆ. ಸರ್ಕಾರ)	13 ಲಕ್ಷ ಟನ್ ಕಡಿಮೆ
2. ಕರ್ನಾಟಕ (ಜನತಾ ಸರ್ಕಾರ)	80 ಸಾವಿರ ಟನ್ ಕಡಿಮೆ
3. ಕೇರಳ (ಕಾಂಗ್ರೆಸ್ ಸರ್ಕಾರ)	1 ಲಕ್ಷ ಟನ್ ಕಡಿಮೆ

ದಾಂಡೇಲಿ

ಇಂಡಿಯನ್ ಪ್ಲೈವುಡ್ ಕಾರ್ಮಿಕರ ಒಪ್ಪಂದ

ದಾಂಡೇಲಿಯಲ್ಲಿ ಸುಮಾರು 37 ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟ ಇಂಡಿಯನ್ ಪ್ಲಾಯ್‌ವುಡ್ ಕಂಪನಿಯು ಸುಮಾರು ಒಂದು ಸಾವಿರ ಕಾರ್ಮಿಕರು ಇರುವ ಕಾರ್ಖಾನೆ. ಈಗಾಗಲೇ ಕಾಗದ ಕಾರ್ಖಾನೆ ಮತ್ತು ದಾಂಡೇಲಿ ಫೆರೋ ಅಲಾಯ್ಸ್ ಕಾರ್ಖಾನೆಗಳ ಕಾರ್ಮಿಕರಿಗೆ ಕನಿಷ್ಟ ಕೂಲಿ 700 ರೂಪಾಯಿ ಇದ್ದರೆ, ಪ್ಲಾಯ್‌ವುಡ್ ಕಾರ್ಮಿಕರಿಗೆ ಕೇವಲ 250 ರೂಪಾಯಿ ಇತ್ತು. ಕಾರ್ಮಿಕರು ಇದರ ವಿರುದ್ಧ ಸಂಘಟಿತವಾಗಿ ಹೋರಾಟ ಪ್ರಾರಂಭಿಸಿದಾಗ ಆಡಳಿತ ವರ್ಗ ಹೀನ ರೀತಿಯಲ್ಲಿ ದಮನ ಕಾಂಡವನ್ನು ಆರಂಭಿಸಿತು.

1981 ರಲ್ಲಿ ಕಾರ್ಮಿಕರ ಒಗ್ಗಟ್ಟಿನಿಂದ ತುಟ್ಟಿ ಭತ್ತೆ ಹಾಗು ಏರಿಳಿಯುವ ತುಟ್ಟಿ ಭತ್ತೆಗಾಗಿ ಆಡಳಿತ ವರ್ಗವನ್ನು ಒತ್ತಾಯಪಡಿಸಲಾರಂಭಿಸಿದರು. ಪರಿಸ್ಥಿತಿ ಕೈಮೀರಿ ಹೋದಾಗ ಆಡಳಿತ ವರ್ಗವು ಕಾರ್ಮಿಕರ ಮನೆಮನೆ ನುಗ್ಗಿ ಕಾರ್ಮಿಕರನ್ನು ಪೋಲೀಸರಿಂದ ಥಳಿಸಿಸಿದರು. ಇದರ ಫಲ ಕೆಲವರು ತಮ್ಮ ಹಲ್ಲುಗಳನ್ನು ಕಳೆದುಕೊಂಡರು ಕೆಲವರು ಊರನ್ನು ಬಿಟ್ಟು ಹೋದರು. ಈ ಎಲ್ಲ ಘಟನೆಗಳ ನಂತರ ಆಡಳಿತ ವರ್ಗವು ಕಾರ್ಮಿಕರ ಒಗ್ಗಟ್ಟನ್ನು ಮುರಿದು ಹಾಕಿದೆ ಎಂಬ ಸಮಾಧಾನದಲ್ಲಿ ಇತ್ತು, ಆದರೆ ಸಿ.ಐ.ಟಿ.ಯು ಕಾರ್ಮಿಕ ಸಂಘವು ಕೆಲವೇ ತಿಂಗಳುಗಳಲ್ಲಿ ಮತ್ತೆ ಬಲಿಷ್ಟವಾಗಿ ವಿ.ಜೆ.ಕೆ ನಾಯರ್ ಇವರ ನೇತೃತ್ವದಲ್ಲಿ ಹೋರಾಟ ಪ್ರಾರಂಭಿಸಿತು. ಆಡಳಿತ ವರ್ಗದ ಕಾರ್ಮಿಕ ವಿರೋಧಿ ನೀತಿಯನ್ನು ಧಿಕ್ಕರಿಸಿ ಸಿಐಟಿಯು ರಾಜ್ಯ ಘಟಕದ ಕಾರ್ಯದರ್ಶಿ ಕಾಮ್ರೇಡ್ ವಿ.ಜೆ.ಕೆ. ನಾಯರ್ ಇವರನ್ನು ಪ್ಲೈವುಡ್ ವರ್ಕರ್ಸ್ ಯೂನಿಯನ್ನಿನ ಅಧ್ಯಕ್ಷರನ್ನಾಗಿ ಮಾಡಿ ಅವರ ನೇತೃತ್ವದಲ್ಲಿ ಆಡಳಿತ ವರ್ಗಕ್ಕೆ ಬೇಡಿಕೆಗಳನ್ನು ಮುಂದಿಟ್ಟರು ಹಾಗೂ ಕಾಮ್ರೇಡ್ ವಿ.ಜೆ.ಕೆ. ನಾಯರ್ ಪ್ಲಾಯ್‌ವುಡ್ ಕಾರ್ಮಿಕರ ಸಮನ್ವಯ ಸಮಿತಿ ಪ್ರಾರಂಭಿಸಿ ಹೋರಾಟದ ತಯಾರಿ ನಡೆಸಿದರು. ಈ ಸಮನ್ವಯ ಸಮಿತಿಯಲ್ಲಿ ಈ ಆಡಳಿತ ವರ್ಗಕ್ಕೆ ಸೇರಿದ ನಾಲ್ಕು ಘಟಕಗಳು ಸೇರಿವೆ ಅವು ದಾಂಡೇಲಿ, ಧಾರವಾಡ, ಹಂಗಾರಕಟ್ಟಾ ಮತ್ತು ನಟ್ಟಾಣಾ. ಈ ಎಲ್ಲ ಕಾರ್ಖಾನೆಯ ಸಂಘಗಳು ಸಿಐಟಿಯು ಸಂಘಕ್ಕೆ ಸಂಯೋಜಿತವಾಗಿವೆ

ಈ ನಾಲ್ಕು ಕಾರ್ಖಾನೆಗಳ ಸಂಘಗಳ ಸಮನ್ವಯ ಸಮಿತಿಯ ಜೊತೆಗೆ ಆಡಳಿತ ವರ್ಗವು ಚರ್ಚೆ ನಡೆಸಿದವು. ಅವುಗಳಲ್ಲಿ ಮುಖ್ಯ ಬೇಡಿಕೆಗಳಾದ ಒಂದು ಪಾಯಿಂಟಿಗೆ ಎಪ್ಪತ್ತು ಪೈಸೆಯಂತೆ ವಿ.ಡಿ.ಎ. ತುಟ್ಟಿ ಭತ್ತೆ ಮತ್ತು ಅರವತ್ತು ರೂಪಾಯಿ ತಿಂಗಳಿಗೆ ತುಟ್ಟಿ ಭತ್ತೆ, ಹತ್ತು ರೂಪಾಯಿ ಮತ್ತು ಹತ್ತು ರೂಪಾಯಿ ಒಟ್ಟು ಎಂಭತ್ತು ರೂಪಾಯಿ ತುಟ್ಟಿ ಭತ್ತೆ ಕೊಡಲು ಆಡಳಿತ ವರ್ಗವು ಒಪ್ಪಿತು. ಈ ಒಪ್ಪಂದವು ಎರಡು ವರ್ಷಗಳ ವರೆಗೆ ಇರುತ್ತದೆ. ಇನ್ನೂ ಕೆಲವು ಬೇಡಿಕೆಗಳು ದೊರಕಿವೆ. ಈ ಒಪ್ಪಂದದಿಂದ ಒಬ್ಬೊಬ್ಬ ಕಾರ್ಮಿಕನಿಗೆ ಸುಮಾರು ಒಂದು ನೂರು ರೂಪಾಯಿಯಿಂದ ಒಂದುನೂರಾ ಐವತ್ತು ರೂಪಾಯಿ ವರೆಗೆ ಸಂಬಳದಲ್ಲಿ ಹೆಚ್ಚಿಗೆ ದೊರೆಯುತ್ತದೆ. ಈ ಒಪ್ಪಂದವು ಜುಲೈ 24 ರಂದು ಎ.ಎಲ್.ಸಿ., ಹುಬ್ಬಳ್ಳಿ ಇವರ ಸಮುಖದಲ್ಲಿ ನಡೆಯಿತು. ಈ ಒಪ್ಪಂದಕ್ಕೆ ಆಡಳಿತ ವರ್ಗದಿಂದ ಶ್ರೀ ಕೆ.ಪಿ. ಕ್ಯಾನ್‌ನ್, ಅಲ್ಫಾನ್ಸೊ, ಇಂಥ್ರ ಎಮ್. ಅಯ್ಯರ್. ನಾಯಕವಾಡಿ ಮತ್ತು ಬಾಕಳೆ ಇವರೊಡನೆ ಕಾರ್ಮಿಕ ಪ್ರತಿನಿಧಿಗಳಾದ ಕಾಮ್ರೇಡ್ ವಿ.ಜೆ.ಕೆ. ನಾಯರ್, ವೀರಭದ್ರ, ಎಮ್. ಬಿ. ಕಟ್ಟಿ, ಅಕ್ರಮ ಖಾನ್ ಇವರ ಸಮ್ಮುಖದಲ್ಲಿ ಒಪ್ಪಂದ ನಡೆಯಿತು. ಜುಲೈ 25 ರಂದು ಪ್ಲೈವುಡ್ ಕಾರ್ಮಿಕರು ಮೆರವಣಿಗೆ ಹಾಗೂ ಬಹಿರಂಗ ಸಭೆಯನ್ನು ನಡೆಸಿದರು. ಸಭೆಯನ್ನು ಉದ್ದೇಶಿಸಿ ಕಾಮ್ರೇಡ್ ವಿ.ಜೆ.ಕೆ ನಾಯರ್ ಒಪ್ಪಂದದ ಬಗ್ಗೆ ವಿವರಣೆ ಕೊಟ್ಟರು. ಪುರಸಭೆಯ ಅಧ್ಯಕ್ಷರಾದ ಕಾಮ್ರೇಡ್ ಟಿ. ಎಸ್. ನಾಯಕ್ ಅವರು ಮಾತನಾಡಿದರು. ಎಮ್. ಬಿ. ಕಟ್ಟಿ, ಅಕ್ರಮ ಖಾನ, ಹಂಪ ನಾಯಕ್ ಇವರೆಲ್ಲರೂ ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡಿದರು.

★

ಮಂಗಳೂರು ತಾಲ್ಲೂಕು ಎಸ್. ಎಫ್. ಐ. ನೂತನ ಸಮಿತಿ

ಆಗಸ್ಟ್ 4 ರಂದು ಪೂರ್ಣ ಪ್ರಕಾಶ್ ಹೊಟೇಲಿನ ಹಾಲ್‌ನಲ್ಲಿ ಸಭೆ ಸೇರಿದ ಭಾರತ ವಿದ್ಯಾರ್ಥಿ ಫೆಡರೇಶನಿನ (ಎಸ್.ಎಫ್.ಐ.) ಮಂಗಳೂರು ತಾಲೂಕು ಮಟ್ಟದ ಸರ್ವ ಸದಸ್ಯರ ಸಭೆಯಲ್ಲಿ 1984-85 ಶೈಕ್ಷಣಿಕ ವರ್ಷಕ್ಕೆ ಈ ಕೆಳಗಿನ ನೂತನ ತಾಲೂಕು ಸಮಿತಿಯನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಅಧ್ಯಕ್ಷ-ಅಶೋಕ್ ಪಿ., ಉಪಾಧ್ಯಕ್ಷರುಗಳು ಕೆ. ಪಿ. ಸಂಜಾತ ಹಾಗೂ ಯೂಸೂಫ್, ಕಾರ್ಯದರ್ಶಿ-ಕೃಷ್ಣಪ್ಪ ಕೆ. ಎಂ., ಜೊತೆ ಕಾರ್ಯದರ್ಶಿ-ಬಾಲಕೃಷ್ಣ ಶೆಟ್ಟಿಗಾರ್, ಖಜಾಂಚಿ-ಚನ್ನಪ್ಪ ಶೆಟ್ಟಿಗಾರ್, ಹಾಗೂ 15 ಮಂದಿ ವಿದ್ಯಾರ್ಥಿಗಳನ್ನು ಒಳಗೊಂಡ ನೂತನ ತಾಲೂಕು ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಸಭೆಗೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕೆ.ಆರ್.ಇ.ಸಿ.ಯ ಪ್ರಾಧ್ಯಾಪಕರಾದ ರಾಜೇಂದ್ರ ಉಡುಪ ಅವರು ಮಾತನಾಡುತ್ತ ಇಂದಿನ ಅವೈಜ್ಞಾನಿಕ ಶಿಕ್ಷಣ ಪದ್ಧತಿ ವಿರುದ್ಧ ವಿದ್ಯಾರ್ಥಿಗಳು ಹೋರಾಡುವುದು ಅವಶ್ಯಕ ಎಂದು ಹೇಳಿದರು.

○

ಕಾರ್ಖಾನೆ ಪ್ರಾರಂಭಕ್ಕೆ ಕೇಂದ್ರದ ವಿರೋಧ

5-8-84 ರಂದು ಧಾರವಾಡದಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ. ವೈ. ಎಫ್. ಐ.) ಧಾರವಾಡ ಜಿಲ್ಲಾ ಸಮಿತಿ ಸಭೆ ಸೇರಿ ಧಾರವಾಡ ಹತ್ತಿರ ಟಾಟಾ ಗ್ರೂಪ್‌ನವರು ಪ್ರಾರಂಭಿಸಿರುವ ಟೆಲ್ಕೊ ಕಾರ್ಖಾನೆಗೆ ಕೇಂದ್ರ ಸರ್ಕಾರವು ಅನುಮತಿ ನಿರಾಕರಿಸಿದ್ದನ್ನು ಖಂಡಿಸಲಾಯಿತು. ಕೇಂದ್ರ ಸರ್ಕಾರವು ವಿಜಯನಗರ ಉಕ್ಕಿನ ಕಾರ್ಖಾನೆ ವಿಷಯದಲ್ಲಿ ಕರ್ನಾಟಕ ಜನತೆಗೆ ಮೋಸ ಮಾಡಿದ್ದಲ್ಲದೆ ಈಗ ಟೆಲ್ಕೊ ವಿಷಯದಲ್ಲೂ ಕೂಡ ಕೇಂದ್ರ ಸರ್ಕಾರ ಕರ್ನಾಟಕ ಜನತೆಗೆ ಮತ್ತೊಮ್ಮೆ ಮೋಸ ಮಾಡಿದೆ. ನಿರುದ್ಯೋಗ ನಿವಾರಿಸುವುದು ಕೇಂದ್ರ ಸರ್ಕಾರಕ್ಕೆ ಬೇಕಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ ಎಂಬುದಾಗಿ ಸಭೆ ಅಭಿಪ್ರಾಯ ಪಟ್ಟಿದೆ ಎಂಬುದಾಗಿ ರಾಜ್ಯ ಸಮಿತಿ ಸದಸ್ಯ ಹಾಗೂ ಜಿಲ್ಲಾ ಸಮಿತಿ ಸಂಚಾಲಕರಾದ ಜಿ. ಎನ್. ದೇಶಪಾಂಡೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿ. ವೈ. ಎಫ್. ಐ. ನೂತನ ಸಮಿತಿ

3-8-84 ರಂದು ಸಿಂಧನೂರಿನಲ್ಲಿ ಡಿ. ವೈ. ಎಫ್. ಐ ನಗರ ಸಮಿತಿಯನ್ನು ರಚಿಸಲಾಗಿದ್ದು ಕೆಳಕಂಡವರು ಪದಾಧಿಕಾರಿಗಳಾಗಿ ಆಯ್ಕೆಯಾಗಿದ್ದಾರೆ

ನರಸಿಂಹಸ್ವ ಸಂಚಾಲಕರು, ಜಿಲಾನಿ ಪಾಶಾ ಸಹ ಸಂಚಾಲಕರು, ಗೋಪಾಲ ಕೃಷ್ಣ ಖಜಾಂಚಿ ಮತ್ತು ಸಮಿತಿಯ ಸದಸ್ಯರು, ಕೃಷ್ಣ, ಮೆಹಬೂಬ್, ಈಸುಫ್, ವಿರುಪಾಕ್ಷಯ್ಯ, ಕೆ. ನಾರಾಯಣ್, ಅಯ್ಯಪ್ಪ ಬೂದಿವಾಳ್, ವನ್ನಿ ಬೇಗಂ, ಹುಸೇನ್ ಬಿ, ಗಂಗಮ್ಮ, ಶಾಮಣ್ಣ, ಸುಭಾನ್, ಸೈದಪ್ಪ.

★

ಬಹಿರಂಗ ಪತ್ರ

ಶಿಡ್ಲಗಟ್ಟ ತಾಲೂಕಿನ ಬಿ. ಡಿ. ಓ ರವರು ಬಹು ದೂರದ ಗ್ರಾಮಾಂತರ ಪ್ರದೇಶಗಳಿಂದ ಬರುವ ಬಡಜನರಿಗೆ ಸಿಗುತ್ತಲೇ ಇಲ್ಲೆಂದೂ, ಯಾವಾಗಲೂ ಜೀಪು ಹತ್ತಿ ಪರಾರಿಯಾಗುತ್ತಾರೆಂದೂ, ಕಾನೂನು ರೀತ್ಯಾ ಸೌಲಭ್ಯಗಳನ್ನು ಬಡವರಿಗೆ ಒದಗಿಸದೆ, ಶ್ರೀಮಂತರಿಗೆ ಕೊಡಲಾಗುತ್ತಿದೆಂದೂ, ಈ ಮಹಾಶಯ ಪ್ರವಾಸಿ ಮಂದಿರದಲ್ಲೇ ವಾಸವಾಗುತ್ತಿದ್ದು, ಅಲ್ಲಿಯೇ ಮೋಜವಾನಿ ನಡೆಯುತ್ತಿವೆಂದೂ, ಬೋಗಸ್ ಮಸ್ಟರ್ ಮಾಡಿ ಹಣ ಪಡೆದು ಇಂಥ ಮೋಜವಾನಿಗಳು ನಡೆಯುತ್ತವೆಂದೂ, ಒಂದು ವಾರದೊಳಗಾಗಿ ಇವೆಲ್ಲ ನಿಂತು ಬಡವರಿಗೆ ನ್ಯಾಯ ಸಿಗಲಾರದಿದ್ದರೆ ಚಳುವಳಿ ಹೂಡಬೇಕಾದೀತೆಂದೂ ಅಖಿಲ ಪಕ್ಷದ ಕಾರ್ಯದರ್ಶಿ ದೊರೆಸ್ವಾಮಿ ಮತ್ತು ಕೋಲಾರ ಜಿಲ್ಲಾ ಆಡಳಿತ ಒಕ್ಕೂಟದ ಸಮಿತಿಯ ಕಾರ್ಯದರ್ಶಿರಾದ ವಾಜಿ ಅವರು ಜನೇಯಪ್ಪ ಬಹಿರಂಗ ಪತ್ರ ಪ್ರಕಟಿಸಿದ್ದಾರೆ.

35 ವರ್ಷಗಳ ಯೋಜನೆ - ಪಾಠ ಕಲಿಯದ ಕಾಂಗ್ರೆಸ್ [ಐ]

[3ನೇ ಪುಟದಿಂದ]

ಎಲ್ಲಾ ಮತದಾರರ ಮೇಲೆ ನಡೆದ ಒಂದು ಹಲ್ಲೆ. ಸದ್ಯದ ಪಟ್ಟಿಯಿಂದ ಯಾರ ಹೆಸರು ತೆಗೆಯಬೇಕೆಂಬ ಪ್ರಸ್ತಾಪವಿದೆಯೋ ಅವರಿಗೆ ತಮ್ಮ ಅಹವಾಲು ಹೇಳಿಕೊಳ್ಳಲು ಅವಕಾಶ ಕೊಡದೇನೇ ದೊಡ್ಡ ಪ್ರಮಾಣದಲ್ಲಿ ಮತದಾನದ ಹಕ್ಕನ್ನು ರದ್ದು ಮಾಡಲಾಗುತ್ತಿದೆ.

ಒಂದು ರಾಜ್ಯದಲ್ಲಿ ಇದಕ್ಕೆ ಅವಕಾಶ ಮಾಡಿಕೊಟ್ಟರೆ, ಇತರ ರಾಜ್ಯಗಳಲ್ಲಿಯೂ ಈ ಪ್ರಕ್ರಿಯೆಗೆ ಪುನರಾವರ್ತನೆಗೆ ದಾರಿ ಮಾಡಿ ಕೊಟ್ಟಂತಾಗುತ್ತದೆ. ಆದ್ದರಿಂದ ಈ ಪ್ರಜಾಪ್ರಭುತ್ವ-ವಿರೋಧೀ ಪ್ರಯತ್ನದ ವಿರುದ್ಧ ರಾಜ್ಯಾದ್ಯಂತ ಪ್ರಚಾರ ನಡೆಸಬೇಕೆಂಬ ಪಕ್ಷದ ರಾಜ್ಯ ಸಮಿತಿಯ ನಿರ್ಣಯವನ್ನು ಪೊಲಿಟ್‌ಬ್ಯೂರೋ ಅನುಮೋದಿಸಿ ದೇಶಾದ್ಯಂತ ವಿಚ್ಛಿದ್ರಕಾರೀ ಪ್ರಯತ್ನದ ವಿರುದ್ಧ ತಮ್ಮ ಧ್ವನಿಯೆತ್ತುವಂತೆ ಜಾತ್ಯತೀತ ಪ್ರಜಾಪ್ರಭುತ್ವವಾದೀ ಶಕ್ತಿಗಳನ್ನು ವಿನಂತಿಸಿಕೊಂಡಿದೆ.

ಸರ್ವಾಧಿಕಾರೀ ಯತ್ನ

ಸಿಕ್ಕಿಂ ಮತ್ತು ಜಮ್ಮು-ಕಾಶ್ಮೀರದ ಚುನಾಯಿತ ಸರಕಾರಗಳನ್ನು ರಾಜ್ಯಪಾಲರ ಹುದ್ದೆಯನ್ನು ದುರುಪಯೋಗಪಡಿಸಿಕೊಂಡು ಕಿತ್ತೆಸೆಯುವುದರಲ್ಲಿ ಯಶಸ್ವಿಯಾದ ಕಾಂಗ್ರೆಸ್ (ಐ) ಈಗ ಇತರ ಕಾಂಗ್ರೆಸ್ಸೇತರ ಸರಕಾರಗಳತ್ತ ಗುರಿಯಿಟ್ಟಿದೆ ಎಂಬುದನ್ನು ಪೊಲಿಟ್‌ಬ್ಯೂರೋ ಗಮನಿಸಿದೆ. ಇತ್ತೀಚೆಗೆ ಎಡರಂಗ ಪಂಚಾಯತ್ ಚುನಾವಣೆಗಳಲ್ಲಿ ಸ್ಪಷ್ಟ ವಿಜಯ ಪಡೆದಿರುವ ತ್ರಿಪುರದಲ್ಲಿ ಕಾಂಗ್ರೆಸ್ (ಐ) ಒಂದು ಹಿಂಸಾತ್ಮಕ ಚಳುವಳಿ ಸಂಘಟಿಸಿ ಚುನಾಯಿತ ಸರ್ಕಾರವನ್ನು ಬರಖಾಸ್ತುಗೊಳಿಸಬೇಕು, ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಬೇಕು ಮತ್ತು ತ್ರಿಪುರಾ ರಾಜ್ಯವನ್ನು "ಗಲಭೆ ಪೀಡಿತ ಪ್ರದೇಶ" ವೆಂದು ಘೋಷಿಸಬೇಕು ಎಂದು ಒತ್ತಾಯಿಸುತ್ತಿದೆ.

ಅತ್ತ ಕರ್ನಾಟಕದಲ್ಲೂ, ಕಾಂಗ್ರೆಸ್ (ಐ) ಜನತಾ ಶಾಸಕೀಯ ಪಕ್ಷದಿಂದ ಪಕ್ಷಾಂತರಿಗಳನ್ನು ಸಂಘಟಿಸಿ ತನ್ಮೂಲಕ ಚುನಾಯಿತ ಸರ್ಕಾರವನ್ನು ಉರುಳಿಸಲು ಸಾಧ್ಯವಾಗುವಂತೆ ಪರಿಸ್ಥಿತಿ ಸೃಷ್ಟಿಸುತ್ತಿದೆ. ಇವೆಲ್ಲದರ ಜತೆಗೆ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರದ ವಿರುದ್ಧ ಮತ್ತು ಆಂಧ್ರ ಪ್ರದೇಶದ ತೆಲುಗು ದೇಶಂ ಸರಕಾರದ ವಿರುದ್ಧ ಸತತ ಪ್ರಚಾರ ನಡೆಸಲಾಗುತ್ತಿದೆ. ಇದರಲ್ಲಿ ಕೇಂದ್ರ ಮಂತ್ರಿಗಳು ಮತ್ತು ಕಾಂಗ್ರೆಸ್ (ಐ) ನ ಅಖಿಲ ಭಾರತ ನಾಯಕರು ಸಕ್ರಿಯ ಪಾತ್ರ ವಹಿಸುತ್ತಿದ್ದಾರೆ. ಕಾಂಗ್ರೆಸ್ಸೇತರ ರಾಜ್ಯಗಳಲ್ಲಿ ಚುನಾಯಿತ ಸರ್ಕಾರವನ್ನು ಉರುಳಿಸಲು ಕಾಂಗ್ರೆಸ್ (ಐ) ಯಾವ ಮಟ್ಟದ ವರೆಗೂ ಹೋಗಬಹುದೆನ್ನುವುದನ್ನು ತೋರಿಸುತ್ತದೆ. ಕಾಂಗ್ರೆಸ್ (ಐ)ನ ಈ ಸರ್ವಾಧಿಕಾರೀ ಪ್ರಯತ್ನಗಳನ್ನು ಎದುರಿಸಬೇಕೆಂದು ದೇಶದ ಎಲ್ಲಾ ಪ್ರಜಾ ಪ್ರಭುತ್ವವಾದೀ ಶಕ್ತಿಗಳನ್ನು ಪೊಲಿಟ್‌ಬ್ಯೂರೋ ವಿನಂತಿಸಿ ಕೊಂಡಿದೆ.

ಕಾನೂನು ಬಾಹಿರ ಕಾನೂನುಗಳು

ಪೊಲಿಟ್ ಬ್ಯೂರೋ ರಾಷ್ಟ್ರೀಯ ಭದ್ರತಾ (ಎರಡನೇ ತಿದ್ದುಪಡಿ) ಮಸೂದೆ ಮತ್ತು ಭಯೋತ್ಪಾದಕ ಕ್ಷೇತ್ರಗಳ ಮಸೂದೆ ಇವೆರಡು ಕರಾಳ ಶಾಸನಗಳನ್ನು ತೀಕ್ಷ್ಣವಾಗಿ ಖಂಡಿಸಿದೆ. ಇವನ್ನು ಮೊದಲು ಸುಗ್ರೀವಾಜ್ಞೆಗಳಾಗಿ ಜ್ಯಾರಿಗೊಳಿಸಿ ನಂತರ ಸಂಸತ್ತಿನ ಶಾಸನಗಳಾಗಿ ಖಾಯಂಗೊಳಿಸಲಾಯಿತು. ಇವುಗಳಲ್ಲಿ ಒಂದು ಶಾಸನ ಇಚ್ಛೆ ಬಂದಂತೆ ಬಂಧಿಸಿ ಒಯ್ಯುವುದು ಮತ್ತು ಬಂಧಿಸುವುದರ ಶರತ್ತುಗಳನ್ನು ಇನ್ನಷ್ಟು ಕಠಿಣಗೊಳಿಸಿ ಬಂಧಿತ ವ್ಯಕ್ತಿಗೆ ತನ್ನ ವಿರುದ್ಧ ಹಾಕಿರುವ ದಾವೆಗಳಲ್ಲಿ ನ್ಯಾಯ ಪೂರ್ಣ ವಿಚಾರಣೆ ಪಡೆಯುವ ಸ್ವಾಭಾವಿಕ ಹಕ್ಕನ್ನು ನಿರಾಕರಿಸಲಾಗಿದೆ. ಇನ್ನೊಂದು ಶಾಸನ ದೇಶದ ಯಾವುದೇ ಭಾಗವನ್ನು "ಗಲಭೆಪೀಡಿತ ಪ್ರದೇಶ" ಎಂದು ಘೋಷಿಸಿ ಆ ಪ್ರದೇಶದ ಜನತೆಯನ್ನು ತಮ್ಮ ಮೂಲಭೂತ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳಿಂದ ವಂಚಿಸಲು ಸರಕಾರಕ್ಕೆ ಅಧಿಕಾರ ನೀಡುತ್ತದೆ. ಈ ಎರಡೂ ಶಾಸನಗಳು ಜತೆಗೂಡಿ ತುರ್ತುಪರಿಸ್ಥಿತಿ ಕಾಲದಲ್ಲಿ ಯಾವ ವಿಧದ ಕಾನೂನು ಬಾಹಿರ ಕಾನೂನು ಇತ್ತೋ ಅದೇ ರೀತಿಯ ಕಾನೂನನ್ನು ತುರ್ತುಪರಿಸ್ಥಿತಿಯ ಔಪಚಾರಿಕ ಘೋಷಣೆಯಿಲ್ಲದೇನೇ ತಂದಿವೆ. ಪ್ರಜಾಪ್ರಭುತ್ವ ವಿರುದ್ಧವಾದ ಈ ಪ್ರಯತ್ನಗಳನ್ನು ಎದುರಿಸಲು ದೇಶದ ಪ್ರಜಾಪ್ರಭುತ್ವವಾದೀ ಪಕ್ಷಗಳಿಗೆ ಪೊಲಿಟ್‌ಬ್ಯೂರೋ ಕರೆ ನೀಡಿದೆ.

ದೇಶವ್ಯಾಪೀ ಪ್ರಚಾರ ನಡೆಸಬೇಕು

ಹಿಂದೆ ಹೇಳಿದ ಆರ್ಥಿಕ ಸಮಸ್ಯೆಗಳಲ್ಲದೆ ಮೇಲೆ ಉಲ್ಲೇಖಿಸಿದಂತೆ ಪ್ರಜಾಪ್ರಭುತ್ವದ ಮೇಲೆ ಹಲ್ಲೆ ನಡೆಸಿರುವ ರಾಜಕೀಯ ಪ್ರಶ್ನೆಯನ್ನೂ ಸಿಪಿಐ [ಎಂ] ಮತ್ತು ಅದರ ಎಡ ಮತ್ತು ಪ್ರಜಾಪ್ರಭುತ್ವವಾದೀ ಮಿತ್ರರು ಎತ್ತಬೇಕೆಂದು ಪೊಲಿಟ್‌ಬ್ಯೂರೋ ಅಭಿಪ್ರಾಯ ಪಡುತ್ತದೆ. ಚುನಾವಣಾ ಪ್ರಚಾರದ ಸಮಯದಲ್ಲಿ ದೇಶಾದ್ಯಂತ ಪ್ರಚಾರ-ಪ್ರಕ್ಷೋಭೆ ಸಂಘಟಿಸುವ ತನ್ನ ದೃಢ ನಿರ್ಧಾರವನ್ನು ವ್ಯಕ್ತಪಡಿಸುತ್ತಾ ಪೊಲಿಟ್‌ಬ್ಯೂರೋ ಇತರ ಎಡ ಹಾಗೂ ಪ್ರಜಾಪ್ರಭುತ್ವ ವಿರೋಧ ಪಕ್ಷಗಳು ಆಳುವ ಪಕ್ಷದ ಧೋರಣೆಗಳನ್ನು ಬಯಲುಗೊಳಿಸುವಲ್ಲಿ ಜತೆಗೂಡುತ್ತವೆಯೆಂದು ಆಶಿಸಿದೆ. ಶಾಂತಿ ಚಳುವಳಿಯಲ್ಲಿ ತನ್ನೊಂದಿಗಿರುವ ಮಿತ್ರ ಪಕ್ಷಗಳ ಜತೆಗೆ ಸಿಪಿಐ (ಎಂ), ಅದೇ ಸಮಯದಲ್ಲಿ ಮಾನವ ಕುಲಕ್ಕೆ ನ್ಯೂಕ್ಲಿಯರ್ ಯುದ್ಧದ ಬೆದರಿಕೆ ಮತ್ತು ಭಾರತ ಸ್ವಾತಂತ್ರ್ಯ, ಐಕ್ಯತೆ ಮತ್ತು ರಾಷ್ಟ್ರೀಯ ಸಮಗ್ರತೆಯ ವಿರುದ್ಧ ಸಾಮ್ರಾಜ್ಯಶಾಹಿ ನಡೆಸುತ್ತಿರುವ ಬಹು ವಿಧ ಹಲ್ಲೆಗಳನ್ನು ಪ್ರತಿಭಟಿಸಿ ತನ್ನ ಧ್ವನಿಯೆತ್ತಿದೆ. ದೇಶದ ಹೆಚ್ಚಿನ ಆರ್ಥಿಕ ಮತ್ತು ರಾಜಕೀಯ ಪ್ರಶ್ನೆಗಳ ಬಗ್ಗೆ ಕೆಲವು ವಿರೋಧ ಪಕ್ಷಗಳು ಎಡರಂಗ ಮತ್ತು ಅದರ ಮಿತ್ರರುಗಳೊಂದಿಗೆ ಸಹಮತ ಹೊಂದಿದ್ದರೂ ಕೂಡಾ ಅಂತರ್‌ರಾಷ್ಟ್ರೀಯ ಪ್ರಶ್ನೆಗಳನ್ನು ಕುರಿತಾದ ಈ ಪ್ರಚಾರ-ಪ್ರಕ್ಷೋಭೆಯನ್ನು ಒಪ್ಪಲಾರವು. ಸಿಪಿಐ [ಎಂ] ಹಾಗೂ ಶಾಂತಿ ಚಳವಳಿಯ ಅದರ ಮಿತ್ರರು ಈ ಅಂತರ್‌ರಾಷ್ಟ್ರೀಯ ಪ್ರಶ್ನೆಗಳನ್ನೆತ್ತಿ ಮತದಾರರ ಸಮ್ಮುಖ ತಮ್ಮ ಸ್ವತಂತ್ರ ಅಭಿಪ್ರಾಯಗಳನ್ನು ಪ್ರಸ್ತುತ ಪಡಿಸುತ್ತವೆ.

ತ್ರಿವಿಧ ಉದ್ದೇಶಗಳ ಸಾಧನೆಗೆ ಕರೆ

ವಿವಿಧ ವಿರೋಧೀ ಪಕ್ಷಗಳಲ್ಲಿ ಇತ್ತೀಚೆಗೆ ನಡೆದ ಬೆಳವಣಿಗೆಗಳನ್ನು ಮತ್ತು ಅವುಗಳಲ್ಲಿ ಹಲವರ ನಡುವೆ ಚುನಾವಣಾ ಐಕ್ಯತೆಯನ್ನು ರೂಪಿಸುವ ಪ್ರಯತ್ನಗಳನ್ನು ಪೊಲಿಟ್‌ಬ್ಯೂರೋ ಪರಿಶೀಲಿಸಿತು. ವಿವಿಧ ರಾಜ್ಯಗಳ ಬೆಳವಣಿಗೆಗಳ ಬಗ್ಗೆ ರಾಜ್ಯ ಸಮಿತಿಗಳ ವರದಿಗಳನ್ನು ಆಲಿಸಿದ ಅದು ಕೇಂದ್ರ ಸಮಿತಿ ತನ್ನ ಕಳೆದ ಸಭೆಯಲ್ಲಿ ವಿವರಿಸಿದ ಮೂರು ಉದ್ದೇಶಗಳನ್ನು ಜ್ಯಾರಿಗೊಳಿಸುವಲ್ಲಿ ನಡೆದಿರುವ ಪ್ರಗತಿಯ ಬಗ್ಗೆ ತನ್ನ ಸಂತಸವನ್ನು ವ್ಯಕ್ತಪಡಿಸಿದೆ (1) ಕಾಂಗ್ರೆಸ್ (ಐ) ನ್ನು ಸೋಲಿಸುವುದು (2) ವಿಚ್ಛಿದ್ರಕಾರೀ ಮತ್ತು ಪ್ರತ್ಯೇಕತಾವಾದಿ ಶಕ್ತಿಗಳನ್ನು ಬೇರ್ಪಡಿಸುವುದು ಮತ್ತು (3) ಜಾತ್ಯತೀತ ಪ್ರಜಾಪ್ರಭುತ್ವವಾದೀ ಶಕ್ತಿಗಳನ್ನು, ವಿಶೇಷವಾಗಿ ಎಡರಂಗವನ್ನೂ ಬಲಪಡಿಸುವುದು ಇವೇ ಆ ಮೂರು ಉದ್ದೇಶಗಳು-ಕೇಂದ್ರಸಮಿತಿ ಕೊಟ್ಟಿರುವ ಸರ್ವಸಾಮಾನ್ಯ ನಿರ್ದೇಶನಗಳಿಗನುಸಾರವಾಗಿ ಮುಂದುವರಿಯುವಂತೆ ರಾಜ್ಯ ಸಮಿತಿಗಳಿಗೆ ಕರೆನೀಡಲು ಪೊಲಿಟ್ ಬ್ಯೂರೋ ನಿರ್ಧರಿಸಿದೆ. ○

ಕಾರ್ಮಿಕ ಸಂಘದ ಕಛೇರಿ ಉದ್ಘಾಟನೆ

ಆಗಸ್ಟ್ 8 ರಂದು ಧಾರವಾಡದ ಹತ್ತಿಕೊಳ್ಳದಲ್ಲಿ ದಿ ಇಂಡಿಯನ್ ಪ್ಲಾಯ್‌ವುಡ್ ಕಾರ್ಮಿಕ ಸಂಘದ ಕಛೇರಿ ಉದ್ಘಾಟನೆ ನಡೆಯಿತು. ಮೊದಲು ಸಿ. ಐ. ಟಿ. ಯು. ನ ಕಾ. ಮುಡಿವಾಳಪ್ಪ ತೋಟಗೇರ ಧ್ವಜಾರೋಹಣ ಮಾಡಿದರು.ಸಮಸ್ತ ಕಾರ್ಮಿಕರು ಧ್ವಜವಂದನೆ ಸಲ್ಲಿಸಿದರು. ನಂತರ ನಡೆದ ಸಮಾರಂಭದ ಅಧ್ಯಕ್ಷತೆಯನ್ನು ಕಾ. ಮುಡಿವಾಳಪ್ಪ ತೋಟಗೇರ ವಹಿಸಿದ್ದರು ಕಾ. ಎ. ಕೆ. ಗೋಪಾಲನ್‌ರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಅವರು ಹಾಕಿ ಕೊಟ್ಟ ಹೋರಾಟದ ದಾರಿಯಲ್ಲಿ ಮುನ್ನಡೆಯುವ ಪ್ರತಿಜ್ಞೆಯನ್ನು ಕಾರ್ಮಿಕರು ಮಾಡಿದರು. ಸಿ. ಐ. ಟಿ. ಯು. ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಹಾಗೂ ಸಂಘದ ಪ್ರ. ಕಾರ್ಯದರ್ಶಿಯಾದ ಕಾ. ಎಂ. ಬಿ. ಕಟ್ಟಿಯವರು ಇದು ಕೇವಲ ಇಂಡಿಯನ್ ಫ್ಲ್ಯಾಯ್‌ವುಡ್ ಕಾರ್ಮಿಕ ಸಂಘದ ಕಛೇರಿಯಾಗಿ ಉಳಿಯದೇ ಸಮಸ್ತ ದುಡಿಯುವ ಜನತೆಯ ಹಿತ ರಕ್ಷಣೆ ಮಾಡುವ ಕಛೇರಿಯಾಗಿಬೆಳೆಯಬೇಕಾಗಿದೆ ಎಂದರು. ಸಂಘದ ಸಹ ಕಾರ್ಯದರ್ಶಿ ಕಾ. ಹಾಗಿಮ ಧಾರವಾಡ ಇವರ ವಂದನಾರ್ಪಣೆ ಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು. ○

ಮೂಡಬಿದ್ರೆ

ಎಸ್. ಎಫ್. ಐ. ಘಟಕ ರಚನೆ

ಮೂಡಬಿದ್ರೆ ಮಹಾವೀರ ಕಾಲೇಜಿನಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್‌ನ (ಎಸ್. ಎಫ್. ಐ.) ನೂತನ ಘಟಕವನ್ನು ಆಗಸ್ಟ್ 4 ರಂದು ಮೂಡಬಿದ್ರೆಯಲ್ಲಿ ನಡೆದ ಸಭೆಯಲ್ಲಿ ರಚಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಸಮಿತಿ ಸದಸ್ಯರಾದ ಅಬ್ದುಲ್ ಖಾದರ್ ವಹಿಸಿದ್ದರು. ಜಿಲ್ಲಾ ಸಮಿತಿ ಕಾರ್ಯದರ್ಶಿ ಸುನಿಲ್ ನಟೇಕರ್ ಎಸ್. ಎಫ್. ಐ ಧ್ಯೇಯ ಉದ್ದೇಶಗಳ ಬಗ್ಗೆ ವಿವರಿಸಿದರು. ಬಳಿಕ ಸರ್ವಾನುಮತದಿಂದ ಘಟಕವನ್ನು ರಚಿಸಲಾಯಿತು.

ಅಧ್ಯಕ್ಷ—ಪ್ರಕಾಶ್ ಆಳ್ವ, ಉಪಾಧ್ಯಕ್ಷ-ಉದಯ-ಕುಮಾರ್, ಕಾರ್ಯದರ್ಶಿ—ಅಬ್ದುಲ್ ಖಾದರ್, ಜೊತೆ ಕಾರ್ಯದರ್ಶಿ ಪ್ರಾನ್ಸಿಸ್, ಖಜಾಂಚಿ-ರವಿಪ್ರಕಾಶ್ ಹಾಗೂ 6 ಮಂದಿ ವಿದ್ಯಾರ್ಥಿಗಳನ್ನು ಒಳಗೊಂಡ ನೂತನ ಸಮಿತಿಯನ್ನು ರಚಿಸಲಾಯಿತು. ○

(2ನೇ ಪುಟದಿಂದ)

ರೈತರ ಸಮಾವೇಶ

ವನ್ನು ನಡೆಸಲಾಯಿತು. ಇದರ ಅಧ್ಯಕ್ಷತೆಯನ್ನು ಬಾಗೇಪಲ್ಲಿ ಕ್ಷೇತ್ರದ ಪಾರ್ಟಿ ಶಾಸಕರಾದ ಕಾ| ಅಪ್ಪಸ್ವಾಮಿ ರೆಡ್ಡಿಯವರು ವಹಿಸಿದ್ದರು ಈ ಸಭೆಯನ್ನು ಉದ್ದೇಶಿಸಿ ಗೌರಿಬಿದನೂರಿನ ಪುರಸಭಾ ಅಧ್ಯಕ್ಷರಾದ ಶ್ರೀ ಬಿ. ನಾಗಯ್ಯನವರು, ಕಾ| ಜೀವಿ. ಶ್ರೀ ರಾಮರೆಡ್ಡಿಯವರು ಮತ್ತು ಕಾ|| ಲಕ್ಷ್ಮಣರೆಡ್ಡಿಯವರು ಮಾತನಾಡಿ ಈ ಬೃಹತ್ ಹೋರಾಟಕ್ಕೆ ಎಲ್ಲಾ ವಿಭಾಗದ ಜನರನ್ನು ಸಂಘಟಿಸಬೇಕೆಂದು ಕರೆ ನೀಡಿದರು. ಮುಂದಿನ ತಿಂಗಳು ಭದ್ರಾಜಲಾಶಯದ ಆಯಕಟ್ಟಿಗೆ ಬರುವ ಎಲ್ಲಾ ಜಿಲ್ಲೆಗಳ ರೈತರ ಸಮಾವೇಶವನ್ನು ಕರೆಯಬೇಕೆಂದು ನಿರ್ಧರಿಸಲಾಯಿತು.

ಇದರ ತಯಾರಿಗಾಗಿ 20 ಜನರ ಒಂದು ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ★

ಮೈಸೂರು

ಅಂಚೆ ನೌಕರರಿಂದ ಧರಣಿ

ಕೇಂದ್ರ ಸಮಿತಿಯ ಆದೇಶದ ಮೇರೆಗೆ ಮೈಸೂರಿನಲ್ಲಿ ಅಂಚೆ ಇಲಾಖೆಯ 3 ಮತ್ತು 4 ನೇ ವರ್ಗದ ಮತ್ತು ಇಲಾಖೇತರ ಸಂಘದ ಸದಸ್ಯರುಗಳು, ಆಗಸ್ಟ್ 9 ಮತ್ತು 10 ರಂದು ಇಲಾಖೇತರ ನೌಕರರ ಪರವಾಗಿ, ತಮ್ಮ ಬೇಡಿಕೆಗಳಾದ ತುಟ್ಟಿ ಭತ್ಯ, ತಾತ್ಕಾಲಿಕ ಪರಿಹಾರ, ಹುದ್ದೆ ಖಾಯಂ ಗೊಳಿಸುವುದು ಮತ್ತು ಇತರೆ ಸೌಲಭ್ಯಗಳಿಗಾಗಿ, ಇಲ್ಲಿಯ ಅಂಚೆ ಪರ್ಯಾಯ ಹಿರಿಯ ಅಧೀಕ್ಷಕರ ಕಛೇರಿ ಮುಂದೆ ಧರಣಿಯನ್ನು ನಡೆಸಿದರು. ಮೈಸೂರು ಜಿಲ್ಲಾ ಸಿಐಟಿಯು ನ ಅಧ್ಯಕ್ಷರಾದ ಕಾ| ಎಂ. ಎನ್. ಉಗ್ರಪ್ಪನವರು ಭೇಟಿ ನೀಡಿ ತಮ್ಮ ಬೆಂಬಲವನ್ನು ಸೂಚಿಸಿದರು. ಧರಣಿಯ ಮುಂದಾಳತ್ವವನ್ನು ಕಾರ್ಯದರ್ಶಿಗಳಾದ ಕಾ| ಆರ್. ಶ್ರೀನಿವಾಸನ್ ಮತ್ತು ರಾಜಶೇಖರಮೂರ್ತಿ ಅವರು ವಹಿಸಿದ್ದರು.

ಪಶ್ಚಿಮ ಬಂಗಾಳದಲ್ಲಿ ಬದಲಾಗುತ್ತಿರುವ ಕೈಗಾರಿಕಾ ದೃಶ್ಯಮಾಲೆ

ಅಭಿವೃದ್ಧಿಯ ಆವೇಗದ ನಿರ್ಮಾಣ ಒಂದಲ್ಲ – ಹಲವು ವಿಧಗಳಲ್ಲಿ

ಪಶ್ಚಿಮ ಬಂಗಾಳದ ಕೈಗಾರಿಕೆ ಕಳೆದ ಏಳು ವರ್ಷಗಳಲ್ಲಿ ಬಹುದೂರ ಸಾಗಿ ಬಂದಿದೆ. ಎಡರಂಗದ ಸತತ ಮತ್ತು ಸುಸಂಗತ ಬೆಂಬಲ ಮತ್ತು ಮಾರ್ಗದರ್ಶನದಿಂದಾಗಿ ಈ ಮಹತ್ವಪೂರ್ಣ ವಲಯದ ಬೆಳವಣಿಗೆಯನ್ನು ಕುಂಠಿತಗೊಳಿಸಿದ ಅರಾಜಕ ಮತ್ತು ಸ್ಥಗಿತತೆಯ ಪ್ರವೃತ್ತಿ ವಿಪರ್ಯಸ್ತಗೊಳ್ಳುವುದು ಸಾಧ್ಯವಾಗಿದೆ.

ಕೈಗಾರಿಕೀಕರಣಕ್ಕಾಗಿ ಸಂಯೋಜಿತ ಪ್ರಯತ್ನಗಳು, ಉದ್ಯೋಗ ಸಾಧ್ಯತೆಗಳನ್ನು ನಿರ್ಮಿಸುವುದಕ್ಕೆ ಸ್ಪಷ್ಟ ಆದ್ಯತೆ, ಕಾರ್ಮಿಕ ಕಲ್ಯಾಣಕ್ಕೆ ಅಭೂತಪೂರ್ವ ಪ್ರಾಧಾನ್ಯತೆ ಮತ್ತು ಗುಡಿ ಹಾಗೂ ಸಣ್ಣ ಕೈಗಾರಿಕೆಗಳಿಗೆ ವ್ಯಾಪಕ ಪ್ರಮಾಣದಲ್ಲಿ ಅವಶ್ಯಕ ಸಾಮಗ್ರಿಗಳ ಪೂರೈಕೆ ಇವೆಲ್ಲಾ ಅಭಿವೃದ್ಧಿಯ ಅತ್ಯಾವಶ್ಯಕ ಆವೇಗವನ್ನು ನಿರ್ಮಿಸಿವೆ.

ತರತೋಲಾದಲ್ಲಿನ ಎಲೆಕ್ಟ್ರಾನಿಕ್ ಎಸ್ಟೇಟ್, ಸಾಲ್ಟ್ ಲೇಕ್‌ನಲ್ಲಿನ ಎಲೆಕ್ಟ್ರಾನಿಕ್ ಸಂಕೀರ್ಣ, ಫಾಲ್ಟಾ ನಿರ್ಯಾತ ಸಂಸ್ಕರಣ ವಲಯ, ಹಲ್ದಿಯಾದಲ್ಲಿನ ಯೋಜಿತ ಪೆಟ್ರೋ–ಕೆಮಿಕಲ್ ಪ್ರಾಜೆಕ್ಟ್, ಸಿಲಿಗುರಿ, ಉಲುಬೇರಿಯಾ, ಬಜ್‌ಬಜ್, ಕೂಚ್‌ಬಿಹಾರ್ ಮತ್ತು ಫರಕ್ಕಾದಲ್ಲಿನ ಅಭಿವೃದ್ಧಿ ಕೇಂದ್ರಗಳು – ಪ್ರತಿಯೊಂದೂ ಪರಿಯೋಜನೆ ಸರಕಾರ ಪ್ರತಿದಿನವೂ ನಡೆಸುತ್ತಿರುವ ಅಗಾಧ ಪ್ರಮಾಣದ ಪ್ರಯತ್ನಗಳಿಗೆ ಸಾಕ್ಷಿಯಾಗಿದೆ. ಪಶ್ಚಿಮ ಬಂಗಾಳದ ಸಾಮಾಜಿಕ-ಆರ್ಥಿಕ ಪ್ರಗತಿಯಲ್ಲಿ ಈ ಸಾಧನೆಗಳ ನಿಜವಾದ ಮಹತ್ವವನ್ನು ದೊಡ್ಡ ಕೈಗಾರಿಕೆಗಳ ವಲಯದಲ್ಲಿ ರಾಜ್ಯ ಸರಕಾರಕ್ಕಿರುವ ಮಿತಿಗಳ ಹಿನ್ನೆಲೆಯಲ್ಲಿ ಸ್ಪಷ್ಟವಾಗಿ ಪರಿವೀಕ್ಷಿಸುವುದು ಸಾಧ್ಯ.

ದೊಡ್ಡ ಹಾಗೂ ಮಧ್ಯಮ, ಅದೇ ರೀತಿ ಗುಡಿ ಮತ್ತು ಸಣ್ಣ ಪ್ರಮಾಣದ ವಲಯಗಳಲ್ಲಿ ಉದ್ಯೋಗಾವಕಾಶಗಳಲ್ಲಿ ಹೆಚ್ಚಳ ಸರಕಾರ ಕೈಗೊಂಡ ಪ್ರಾಮಾಣಿಕ ಪ್ರಯತ್ನದ ಫಲಿತಾಂಶವನ್ನು ಕೂಡಾ ತೋರಿಸಿಕೊಡುತ್ತದೆ. ಸಂಘಟಿತ ವಲಯಗಳಲ್ಲಿ ಉದ್ಯೋಗಾವಕಾಶ ಗಮನಾರ್ಹವಾಗಿ ಹೆಚ್ಚಿದೆ.

ಎಲೆಕ್ಟ್ರಾನಿಕ್ಸ್‌ನಿಂದ ಹಿಡಿದು ಕೈಮಗ್ಗದವರೆಗೆ, ಚರ್ಮದಿಂದ ಹಿಡಿದು ರೇಷ್ಮೆಯವರೆಗೆ ಗುಡಿ ಮತ್ತು ಸಣ್ಣ ಕೈಗಾರಿಕೆಗಳಲ್ಲಿನ ಪ್ರಮುಖ ಅಭಿವೃದ್ಧಿ ಹೊಸ-ಹೊಸ ಉದ್ಯೋಗಾವಕಾಶಗಳಿಗೆ ದಾರಿ ಮಾಡಿ ಕೊಡುತ್ತಿದೆ. ಸದ್ಯದ ಉದ್ಯೋಗಾವಕಾಶಗಳಿಗೆ ಬಲವಾದ ರಕ್ಷಣೆ ದೊರೆಯುತ್ತಿದೆ. ಬೆಲೆಗೆ ಪ್ರಾಶಸ್ತ್ಯ ನೀಡುವ ಧೋರಣೆಗಳು, ಕಚ್ಚಾ ಸಾಮಗ್ರಿಗಳ ನಿಯಮಿತ ಪೂರೈಕೆ ಮತ್ತು ಉದಾರ ಪ್ರೋತ್ಸಾಹಕ ನೆರವುಗಳು ಅನುಕೂಲಕರ ಸನ್ನಿವೇಶವನ್ನು ಸೃಷ್ಟಿಸಿವೆ. ಸರಕಾರ ಪ್ರತಿವರ್ಷ ನೂರಾರು ಹೊಸ ಘಟಕಗಳನ್ನು ಆರಂಭಿಸಲು ಅಭಿವೃದ್ಧಿ, ಸಂಘಟನೆಗಳ ಮತ್ತು ಹಣಕಾಸಿನ ಸಂಸ್ಥೆಗಳ ಮೂಲಕ ಸಕ್ರಿಯ ಸಹಾಯ ಒದಗಿಸುತ್ತಿದೆ.

ಇನ್ನೂ ಹಲವಾರು ಸಮಸ್ಯೆಗಳನ್ನು ಬಗೆಹರಿಸಬೇಕಾಗಿದೆ, ಹಲವಾರು ಪ್ರಮುಖ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಆದರೂ ಶ್ರಮಜೀವಿ ಜನಸಾಮಾನ್ಯರಿಗಾಗಿ ಅವ್ಯಾಹತವಾಗಿ ಮಡಿಯುತ್ತಿರುವ ಜನತೆಯ ಸರಕಾರವೊಂದನ್ನು ಇಲ್ಲಿ ಕಾಣಬಹುದು. ಕೈಗಾರಿಕೆಗಳ ಅಭಿವೃದ್ಧಿಗೆ ಮತ್ತು ಕಾರ್ಮಿಕರ ಕಲ್ಯಾಣಕ್ಕೆ ಬದ್ಧವಾಗಿರುವ ಪಶ್ಚಿಮ ಬಂಗಾಳ ಒಂದು ಉಜ್ವಲ ಭವಿಷ್ಯದತ್ತ ಮುನ್ನಡೆಯುತ್ತಿದೆ.

ಜನತೆಯ ಹೋರಾಟದ ಮುಂಚೂಣಿಯಲ್ಲಿ ಏಳು ವರ್ಷಗಳು

GOVERNMENT OF WEST BENGAL

ಸಾಮ್ರಾಜ್ಯಶಾಹಿಗಳ ಮತ್ತು ವಿಚ್ಛಿದ್ರಕಾರಿ ಶಕ್ತಿಗಳ ಕುರಿತು ಎಚ್ಚರಿಕೆ

(1ನೇ ಪುಟದಿಂದ)

…ನ್ನು ಶಾಂತಿ ಕಾಪಾಡುವ ಮಹಾ ಯಜ್ಞದಲ್ಲಿ ಭಾಗಿಗಳಾಗುವಂತೆ ಮಾಡಬೇಕಾಗಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಈ ಹೋರಾಟದಲ್ಲಿ ಮುಂಚೂಣಿಯಲ್ಲಿರಬೇಕಾಗಿದೆ.

ಭಾರತದ ಪರಿಸ್ಥಿತಿ

ಈಗ ಭಾರತ ದೇಶದ ಆಂತರಿಕ ಪರಿಸ್ಥಿತಿಯನ್ನು ವೀಕ್ಷಿಸೋಣ. ಪ್ರತಿ ದಿನ ಎಂಬಂತೆ ಇಂದಿರಾ ಗಾಂಧಿ "ದೇಶವು ಅಪಾಯವನ್ನು ಎದುರಿಸುತ್ತಿದೆ" ಎಂದು ಬೊಬ್ಬಿಡುತ್ತಿದ್ದಾರೆ. "ರಾಷ್ಟ್ರೀಯ ಸ್ವಾತಂತ್ರ್ಯಕ್ಕೆ ಅಪಾಯವಿದೆ" ಎಂದು ಘೋಷಿಸುತ್ತಿದ್ದಾರೆ. ಇತ್ತೀಚೆಗೆ ದೇಶದಲ್ಲಿ ವಿಚ್ಛಿದ್ರಕಾರಿ ಶಕ್ತಿಗಳು ಪ್ರಬಲವಾಗುತ್ತಿವೆ, ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಸವಾಲನ್ನು ಈ ಶಕ್ತಿಗಳು ಒಡ್ಡುತ್ತಿವೆ ಎನ್ನುತ್ತಿದ್ದಾರೆ. ಸತತವಾಗಿ ಈ ರೀತಿ ಇಂದಿರಾಗಾಂಧಿ ಹೇಳುತ್ತಾ ಬರುತ್ತಿರುವುದಾದರೂ, ಕಾರ್ಯದಲ್ಲಿ ಇಂದಿರಾಗಾಂಧಿ ಕಾಂಗ್ರೆಸ್ಸು ಸರಕಾರವು ಈ ಅಪಾಯವನ್ನು ಎದುರಿಸಲು, ಈ ವಿಚ್ಛಿದ್ರಕಾರೀ ಶಕ್ತಿಗಳನ್ನು ಸಂಪೂರ್ಣವಾಗಿ ದಮನ ಮಾಡಲು ಯಾವ ಧೋರಣೆಗಳನ್ನು ಅನುಸರಿಸುತ್ತಿದ್ದಾರೆ. ಯಾವ ಪ್ರಾಯೋಗಿಕ ಹೆಜ್ಜೆಗಳನ್ನಿಡುತ್ತಿದ್ದಾರೆ ಎಂದು ವೀಕ್ಷಿಸಿದರೆ ಅವರು ಹೇಳುವುದು ಒಂದು ಮಾಡುವುದು ಅದಕ್ಕೆ ತೀರಾ ವಿರೋಧವಾದುದು ಎಂಬುದು ತಿಳಿದುಬರುತ್ತದೆ. ಇಂದಿರಾ ಗಾಂಧಿ ಈ ಅಪಾಯಗಳನ್ನೆದುರಿಸಿ, ದೇಶದ ಐಕ್ಯತೆ ಮತ್ತು ಸಮಗ್ರತೆಗಳನ್ನು ಎತ್ತಿ ಹಿಡಿಯಲು ಅನುಸರಿಸುವ ನೀತಿ ನಿರೂಪಣೆಗಳು, ಕಾರ್ಯತಂತ್ರಗಳು ಪ್ರಾಯೋಗಿಕ ಕ್ರಮ ವಿಧಾನಗಳೂ ಎರಡೂ ಈ ಅಪಾಯಗಳ ಪ್ರಯೋಜನವನ್ನು ತನ್ನ ಕಾಂಗ್ರೆಸ್ (ಐ) ಪಕ್ಷದ ಪ್ರಾಬಲ್ಯ ಬೆಳೆಸುವುದಕ್ಕೂ, ಮುಂಬರುವ ಪಾರ್ಲಿಮೆಂಟರಿ ಚುನಾವಣೆಗಳಲ್ಲಿ ತಾನು ಜಯಿಸಿ ಬರುವುದಕ್ಕೂ ಉಪಯೋಗಿಸುತ್ತಿದ್ದಾರೆ ಎಂದು ಎದ್ದು ತೋರುತ್ತದೆ.

ಪಂಜಾಬಿನ ಸಮಸ್ಯೆಯಾಗಲೀ ಅಸ್ಸಾಂ ಸಮಸ್ಯೆಯಾಗಲೀ, ಈಶಾನ್ಯ ಭಾರತದ ಸಮಸ್ಯೆಯಾಗಲೀ ಪರಿಹಾರ ಕಾಣುತ್ತಿಲ್ಲ. ಈ ಎಲ್ಲಾ ಪ್ರದೇಶಗಳಲ್ಲಿ ಇಂದು ಒಂದಲ್ಲಾ ಒಂದು ರೀತಿಯಲ್ಲಿ ಯಥಾರ್ಥವಾಗಿ ಸೈನಿಕ ಆಡಳಿತಗಳು ಇವೆ ಎಂಬುದಂತೂ ಸತ್ಯ. ಮತೀಯ ಸೌಹಾರ್ದತೆಯ ಪ್ರಶ್ನೆಯನ್ನೇ ತೆಗೆದುಕೊಳ್ಳೋಣ. ಹಿಂದೂ, ಸಿಖ್, ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಮೊದಲಾದ ಎಲ್ಲಾ ಮತ ಬಾಂಧವರ ತ್ಯಾಗ ಬಲಿದಾನದ ಫಲವಲ್ಲವೇ ಭಾರತದ ಸ್ವಾತಂತ್ರ್ಯ? ಆದರೆ ಈಗ ಎಲ್ಲಿದೆ ಈ ಎಲ್ಲಾ ಮತಗಳು ಜತೆಗೂಡಿ ದೇಶದ ಮುನ್ನಡೆಗಾಗಿ ದುಡಿಯುವ, ಹೋರಾಡುವ ಚಿತ್ರ? ಎಲ್ಲೆಡೆಯಲ್ಲೂ ಹಿಂದೂ ಮುಸ್ಲಿಂ ಮತೀಯ ಗಲಭೆಗಳು. ನಿನ್ನೆ ಮೊರಾದಾಬಾದ್ ಆದರೆ ಇಂದು ಭೀವಂಡಿ, ಒಂದು ದಿನ ಹೈದರಾಬಾದ್ ಆದರೆ ಇನ್ನೊಂದು ದಿನ ಅಲಿಘಡ, ಹುಬ್ಬಳ್ಳಿ "ಎಲ್ಲಾ ಮುಸ್ಲಿಮರು ಪಾಕಿಸ್ತಾನಕ್ಕೆ ಹೋಗಲಿ" ಎಂದು ಬಹಿರಂಗವಾಗಿ ಗುಡುಗುವ ಹಿಂದೂ ಮಹಾ ಸಂಘಟನೆಯ ಬಾಳಾ ಠಾಕ್ರೆ ಇಂದು ಸರ್ವ ಸ್ವತಂತ್ರವಾಗಿ ತಿರುಗಾಡುತ್ತಿದ್ದಾನೆ. ಕಾಂಗ್ರೆಸ್ (ಐ) ಯ ಕೃಪೆಯಿಂದಲ್ಲವೇ? "ಭೀವಂಡಿ, ಮುಂಬೈ ಮೊದಲಾದೆಡೆ ಮತೀಯ ಗಲಭೆಗಳು ನಡೆಯುತ್ತಿದ್ದಾಗ, ಅಲ್ಲಿ ಉಪಯೋಗಿಸಲಾದ ಶಸ್ತ್ರಾಸ್ತ್ರಗಳನ್ನು ಧಾರಾಳವಾಗಿ ಒದಗಿಸಿದ ಕೈಗಳು ಹಾಜಿ ಮಸ್ತಾನ್ ಮುಂತಾದವರು ಕೊಟ್ಟದ್ದಲ್ಲವೇ? ಈ ಕೈಗಳಿಗೆ ಬೆಂಬಲ "ಕಾಂಗ್ರೆಸ್ (ಐ) ಯ ಮಹಾ ಕೈಯಲ್ಲವೇ? ಈ ಎಲ್ಲಾ ಮತೀಯ ಗಲಭೆಗಳ ವೇಳೆಯಲ್ಲಿ ಪೋಲೀಸು ದಳಗಳು ಸಂಪೂರ್ಣ ನಿರ್ವೀರ್ಯರಾಗಿರುವುದು ಕಂಡು ಬರುತ್ತದೆ ಮಾತ್ರವಲ್ಲ, ಪೋಲೀಸು ಸಿಬ್ಬಂದಿಗಳು ಪ್ರತ್ಯಕ್ಷವಾಗಿ ಗಲಭೆಗಳಲ್ಲಿ ಒಂದು ಭಾಗದಲ್ಲಿ ನಿಂತು ಭಾಗವಹಿಸುವುದನ್ನು ನಾವು ಕಾಣುತ್ತಿದ್ದೇವೆ! ಈ ಎಲ್ಲಾ ಕಡೆಗಳಲ್ಲಿ ರಕ್ಷಣೆಗೆ ಸೈನಿಕ ದಳಗಳೇ ಬರಬೇಕಾಗಿರುವ ಸ್ಥಿತಿ ಬಂದಿರುವುದು ಕಾಣುವುದಿಲ್ಲವೇ?

ಯೋಚಿಸಿ ನೋಡೋಣ. ದೇಶದಲ್ಲಿ ಒಂದೇ ಸಮಯದಲ್ಲಿ 50-100 ಪ್ರದೇಶಗಳಲ್ಲಿ ಈ ರೀತಿಯ ಮತೀಯ ಗಲಭೆಗಳು ಸಂಘಟಿಸಲ್ಪಟ್ಟರೆ ಇವುಗಳನ್ನು ಸಂಘಟಿಸುವ ಶಕ್ತಿ ಇಂದು ಹಿಂದೂ ಏಕತಾ ವಾದಿಗಳಿಗೆ, ಮುಸ್ಲಿಂ ಮೂಲಭೂತ ವಾದಿಗಳಿಗೆ, ಇವುಗಳಲ್ಲೆಲ್ಲಾ ಸಂಪೂರ್ಣ ಒಳ ನುಸುಳಿಕೊಂಡಿರುವ ಬಿ. ಜೆ. ಪಿ.-ಕಾಂಗ್ರೆಸ್ (ಐ) ಮತ್ತಿತರ ಬಂಡವಾಳಶಾಹೀ ಭೂಮಾಲಕ ಪಕ್ಷಗಳವರಿಗೆ ಇವೆ ಎಂಬುದಂತೂ ಖಾತ್ರಿ.

ಕೇರಳದ ಕಾಂಗ್ರೆಸ್ (ಐ) ಸರ್ಕಾರವು ಎಲ್ಲಾ ಜಾತಿಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಸಂಘಟಿಸಿ ಅವುಗಳಿಗೆಲ್ಲಾ ಸ್ಥಾನಗಳನ್ನು ಕೊಟ್ಟು ಅವುಗಳ ಬೆಂಬಲದಲ್ಲಿ ನಡೆಸಲ್ಪಡುತ್ತಿದೆಯಲ್ಲವೇ? ಜಾತಿ ನಿರ್ಮೂಲನವೇ ನಮ್ಮ ಗುರಿ ಎನ್ನುವ ಸ್ವಾತಂತ್ರ್ಯ ಕಾಲದ ಘೋಷಣೆಯೆಲ್ಲಿ? ಜಾತಿ ಜಾತಿಗಳಾಗಿ ಜನತೆಯನ್ನು ವಿಂಗಡಿಸಿ ಅವುಗಳ ಬೆಂಬಲದಲ್ಲಿ ಆಳುವ ಇಂದಿನ ಇಂದಿರಾ ಕಾಂಗ್ರೆಸ್ಸಿನ ನೀತಿ ಎಲ್ಲಿ?

37 ವರ್ಷಗಳ ಭೂಮಾಲಕ, ಬಂಡವಾಳಶಾಹೀ ವರ್ಗಗಳ ಆಡಳಿತ, ಗುತ್ತೇದಾರಿ ಬಂಡವಾಳಶಾಹಿಗಳ ಆಡಳಿತ, ಕಾಂಗ್ರೆಸ್ (ಐ) ಆಡಳಿತ, ಶ್ರೀಮತಿ ಇಂದಿರಾ ಗಾಂಧಿ ಇಂದು ಭಾರತದ ಸಮಸ್ಯೆಗಳನ್ನು ಯಾವ ವಿಧದಲ್ಲೂ ಬಗೆಹರಿಸುವ ಸಾಧ್ಯತೆಯನ್ನು ಕಳೆದು ಕೊಂಡಿವೆ. ಆ ಸಾಮರ್ಥ್ಯ ಅವರಿಗೆ ಇಲ್ಲ ಎಂಬುದು ಸರ್ವ ವಿದಿತವಾಗಿದೆ. ಸಾಮ್ರಾಜ್ಯಶಾಹಿಗಳ ಅಪಾಯ, ವಿಚ್ಛಿದ್ರಕಾರಿಗಳ ಅಪಾಯ, ದೇಶ ಗಂಡಾಂತರದಲ್ಲಿದೆ ಎಂದು ಬೊಬ್ಬಿಟ್ಟರೆ ಸಾಲದು. ಈ ಅಪಾಯಗಳನ್ನು ಎದುರಿಸಿ ಹೋರಾಡುವ ನೀತಿಗಳನ್ನು ಕಾರ್ಯತಃ ನಿರೂಪಿಸಬೇಕಾಗಿದೆ. ಸಾಮ್ರಾಜ್ಯ ಶಾಹಿಗಳಿಂದಲೇ ಎಲ್ಲಾ ರೀತಿಯ ಬೆಂಬಲವನ್ನು ಪಡೆಯುತ್ತಿರುವ ವಿಚ್ಛಿದ್ರಕಾರೀ ಶಕ್ತಿಗಳನ್ನು ಸಂಪೂರ್ಣವಾಗಿ ದಮನ ಮಾಡಲು ಹೋರಾಡುವ ಸಮರ್ಥ ರಾಜಕೀಯ ಪಕ್ಷ ಬೇಕಾಗಿದೆ. ಕಾಂಗ್ರೆಸ್ (ಐ) ಪಕ್ಷವು ಇಂದಿರಾ ಗಾಂಧಿ ನೇತೃತ್ವದಲ್ಲಿ ಈ ಪಾತ್ರವನ್ನು ವಹಿಸುವ ಸಾಮರ್ಥ್ಯವನ್ನು ಕಳೆದು ಕೊಂಡಿದೆ.

ಇತ್ತೀಚೆಗೆ ಒಂದು ವ್ಯಂಗ್ಯ ಚಿತ್ರದಲ್ಲಿ ಪ್ರಕಟವಾದಂತೆ ಇಂದಿರಾ ಗಾಂಧಿ ಅಧಿಕಾರದಲ್ಲಿ ಉಳಿದಿದ್ದಾಳೆ ಅಷ್ಟೆ. ದೇಶದ ಯಾವುದೇ ಸಮಸ್ಯೆಗಳಿಗೆ ಪರಿಹಾರವನ್ನು ಕಾಣುವ ಅದರಲ್ಲೂ ಪ್ರಜಾ ಪ್ರಭುತ್ವ ರೀತಿಯಲ್ಲಿ ಕಾಣುವ ಪರಿಸ್ಥಿತಿಯೇ ಇಲ್ಲವಾಗಿದೆ.

ದೇಶದ ಪರಿಸ್ಥಿತಿಯು ದೇಶವು ಸಂದಿಗ್ಧ 'ತಿರುವು ಬಿಂದು" ವಿನಲ್ಲಿದೆ ಎಂಬುದನ್ನು ಬೊಟ್ಟು ಮಾಡಿ ತೋರಿಸುತ್ತಿದೆ.

ಈ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸುವ ನೀತಿ-ಧೋರಣೆ-ಕಾರ್ಯಕ್ರಮ ಮತ್ತು ದೃಢತೆಯುಳ್ಳ ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷವೂ ಅತ್ಯಂತ ಗಂಭೀರವಾಗಿ ಈ ಅಪಾಯಗಳನ್ನು ಎದುರಿಸಲು ಮುಂದಾಗ ಬೇಕಾಗಿದೆ. ದೇಶಕ್ಕೆ ಅಪಾಯವನ್ನು ತರುವ ಎಲ್ಲಾ ನೀತಿಗಳನ್ನು ದೃಢವಾಗಿ ಸೋಲಿಸಲು ಮುಂದಾಗೋಣ. ವಿಚ್ಛಿದ್ರಕಾರೀ ಶಕ್ತಿಗಳ ಪಿತೂರಿ—ಸಾಮ್ರಾಜ್ಯಶಾಹಿಗಳ ಪಿತೂರಿಯನ್ನು ಸಂಪೂರ್ಣವಾಗಿ ಮುರಿದಿಕ್ಕಲು ಮುಂದಾಗೋಣ.

ಉಡುಪಿಯಲ್ಲಿ 'ಹಿರೋಶಿಮಾ' ದಿನಾಚರಣೆ

ಉಡುಪಿ ಡಿ. ವೈ. ಎಫ್. ಐ. ನ ಆಶ್ರಯದಲ್ಲಿ ಜಾಗತಿಕ ಶಾಂತಿ, ಸೌಹಾರ್ದತೆಯ ಪ್ರಚಾರವಾಗಿ, "ಹಿರೋಶಿಮಾ ದಿನಾಚರಣೆ" ಯನ್ನು ದಿನಾಂಕ 6-8-84 ರಂದು ಆಚರಿಸಲಾಯಿತು, ಅಂದು ಉಡುಪಿಯ ಕಡಿಯಾಳಿಯಲ್ಲಿ ಸೇರಿದ್ದ ಸಂಘಟನೆಯ ಸದಸ್ಯರನ್ನುದ್ದೇಶಿಸಿ ಮಾತನಾಡಿದ ಕಲ್ಯಾಣಪುರ ಮಿಲಾಗ್ರಿಸ್ ಕಾಲೇಜಿನ ಪ್ರಾಧ್ಯಾಪಕ ಶ್ರೀ ಎಸ್. ಆರ್. ವಿಜಯ ಶಂಕರರವರು ಎಲ್ಲ ಶಾಂತಿ ಪ್ರಿಯ ನಾಗರಿಕರು ಯುದ್ಧದ ಭೀಕರತೆಯ ಬಗ್ಗೆ ಸರಿಯಾದ ತಿಳುವಳಿಕೆ ಹೊಂದಿ ಯುದ್ಧಕೋರ ದೇಶದ ಧೋರಣೆಗಳ ವಿರುದ್ಧ ಪ್ರಜಾಭಿಪ್ರಾಯ ಮೂಡಿಸುವಲ್ಲಿ ಸಕ್ರಿಯರಾಗಬೇಕೆಂದು ಕರೆ ಇತ್ತರು.

ನಮ್ಮ ಪ್ರಚಾರ ಮಾಧ್ಯಮಗಳ ಕುಹಕ ಪ್ರಚಾರದಿಂದಾಗಿ ಸಾಮಾನ್ಯ ಜನರಲ್ಲಿ ಸಮಾಜವಾದಿ ರಷ್ಯಾ ಮತ್ತು ಬಂಡವಾಳಶಾಹಿ ಅಮೇರಿಕಾ ಎರಡೂ ಯುದ್ಧ ಸಿದ್ಧತೆಯನ್ನು ಮಾಡುತ್ತಿವೆ ಎಂಬ ಅಭಿಪ್ರಾಯ ಮೂಡುವ ಅಪಾಯವಿದೆ. ಸಮಾಜವಾದೀ ರಷ್ಯಾ ತಾನಾಗಿ ಯುದ್ಧ ಪ್ರಾರಂಭಿಸುವುದಿಲ್ಲವೆಂದು ಹೇಳಿದ್ದಕ್ಕೆ ಅದೇ ಧಾಟಿಯ ಪ್ರತಿಕ್ರಿಯೆ ಏಕೆ ಅಮೇರಿಕಾ ಸರಕಾರದಿಂದ ಬರಲಿಲ್ಲ? ಎಂದು ಪ್ರಶ್ನಿಸಿದ ವಿಜಯ ಶಂಕರರು ರೈತ ಕಾರ್ಮಿಕರ ಸರಕಾರದ ಧೋರಣೆಗೂ ಬಂಡವಾಳಶಾಹಿ ಸರಕಾರದ ನೀತಿಗೂ ಬಹಳ ವ್ಯತ್ಯಾಸವಿರುವುದನ್ನು ಯುವಜನರು ಮನಗಾಣಬೇಕೆಂದರು.

ಆರಂಭದಲ್ಲಿ ಸ್ವಾಗತಿಸಿದ ಉಡುಪಿ ಯುವಜನ ಸಂಘಟನೆಯ ಸಂಚಾಲಕ ರಮೇಶ್ ಮೆಂಡನ್ ಕೊನೆಯಲ್ಲಿ ಧನ್ಯವಾದ ಅರ್ಪಿಸಿದರು.

(1ನೇ ಪುಟದಿಂದ)

ದೇಶದ ಸಾರ್ವಭೌಮತ್ವವನ್ನು ರಕ್ಷಿಸುವುದು, ಜಾತಿ-ಸೌಹಾರ್ದತೆಗಳನ್ನು ಕಾಪಾಡುವುದು, ನಾಗರಿಕ ಹಕ್ಕುಗಳನ್ನು ಉಳಿಸುವುದು ಜನರ-ದೇಶದ ಹಿತ ದೃಷ್ಟಿಯಿಂದ ಅತ್ಯಗತ್ಯ. ಅದಕ್ಕಾಗಿಯೇ ಎಡ ಮತ್ತು ಪ್ರಜಾ ಪ್ರಭುತ್ವ ಶಕ್ತಿಗಳು ಬಲಗೊಳ್ಳಬೇಕೆಂದೂ, ವರ್ಗ ಜಾಗೃತಿ ಉಂಟಾಗಬೇಕೆಂದೂ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಕರೆ ಕೊಡುತ್ತ ಬಂದಿದೆ. ಅಂಥ ಚಳುವಳಿ ಬೆಳೆದು ಬರುತ್ತಿರುವುದರಿಂದಲೇ ಕೇಂದ್ರ ಸರ್ಕಾರ, ಇಂದಿರಾ ಕಾಂಗ್ರೆಸ್ ಪಕ್ಷದ ಜನ ವಿರೋಧಿ ನೀತಿಯ ವಿರುದ್ಧ ಸಂಯುಕ್ತ ಪ್ರತಿಭಟನೆ ಸಂಘಟಿಸಲು, ವ್ಯಕ್ತ ಮಾಡಲು ಸಾಧ್ಯವಾಗಿದೆ. ಅದನ್ನು ಇನ್ನೂ ಹೆಚ್ಚು ಬೆಳೆಸುವುದು ಅತ್ಯಗತ್ಯ.

ರೈತರ ಸಭೆ - ಹಕ್ಕು ಪತ್ರಕ್ಕೆ ಒತ್ತಾಯ

ಮಂಗಳೂರು ತಾಲೂಕಿನ ಸೋಮೇಶ್ವರ ಗ್ರಾಮದ ರೈತರ ಸಭೆಯು 9-8-84 ರಂದು ಸೋಮೇಶ್ವರ ಪಂಚಾಯತ್ ಮಾಜಿ ಅಧ್ಯಕ್ಷರಾದ ಪಿ. ಪರಮೇಶ್ವರ ಶೆಟ್ಟಿ ಯವರ ಅಧ್ಯಕ್ಷತೆಯಲ್ಲಿ ನಡೆಯಿತು. ರಾಮಚಂದ್ರ ಉಚ್ಚಿಲ್ ರವರು ದ. ಕ. ಜಿಲ್ಲಾ ರೈತ ಸಂಘವು ರೈತರ ಸಮಸ್ಯೆಯ ಬಗ್ಗೆ ಕೈಗೊಂಡ ತೀರ್ಮಾನವನ್ನು ಸಭೆಗೆ ವಿವರಿಸಿದರು.

ಗ್ರಾಮದಲ್ಲಿ ಸರ್ಕಾರಿ ಸ್ಥಳದಲ್ಲಿ ಮನೆ ಕಟ್ಟಿ ವಾಸಿಸುತ್ತಿರುವವರಿಗೆ ಕೂಡಲೇ ಹಕ್ಕು ಪತ್ರ ಕೊಡಬೇಕೆಂದು ಸರ್ಕಾರವನ್ನು ಒತ್ತಾಯಿಸಲು ತೀರ್ಮಾನ ಕೈಗೊಂಡಿತು. ಮತ್ತು ಕೇಂದ್ರ ಸರಕಾರದ ನಗರಾಸ್ತಿ ಮಿತಿ ಕಾಯ್ದೆಯಿಂದ ಅಧಿಕಾರಿಗಳು ರೈತರಿಗೆ ಪದೇ ಪದೇ ನೋಟೀಸು ಕಳುಹಿಸಿ ಕಿರುಕುಳ ಕೊಡುವುದನ್ನು ಸಭೆಯಲ್ಲಿ ಖಂಡಿಸಲಾಯಿತು.

ಬಳಿಕ ಮುಂದಿನ ಚಟುವಟಿಕೆ ನಡೆಸಲು ಒಂದು ಹೊಸ ಕಮಿಟಿಯನ್ನು ರಚಿಸಲಾಯಿತು. ಅಧ್ಯಕ್ಷರಾಗಿ ಪಿ. ಪರಮೇಶ್ವರ ಶೆಟ್ಟಿರೂ, ಉಪಾಧ್ಯಕ್ಷರಾಗಿ ತನಿಯಪ್ಪ ಪೂಜಾರಿ, ಕಾರ್ಯದರ್ಶಿಯಾಗಿ ಪಿ. ಗಂಗಯ್ಯ ಗಟ್ಟಿ ಹಾಗೂ ಜತೆ ಕಾರ್ಯದರ್ಶಿಯಾಗಿ ಸುರೇಶ್ ರೈ ಮತ್ತು ಕೋಶಾಧಿಕಾರಿಯಾಗಿ ರಾಮನಾಥ ಗಟ್ಟಿಯವರನ್ನು ಆರಿಸಲಾಯಿತು.

Printed & Published by p. Ramachandra Rao by him on behalf of the Communist party of India (Marxist) Karnataka State Committee, K. V. Temple Street, Sultanpet, Bangalore-560053 Editoral and managerial office, L-56, K V. Temple Street, Sultanpet B 53 Phone : 24514
Editor : P. Ramachandra Rao
Managing Editor : N. K. Upadhyaya